ಬೀದರ • ಕಲಬುರಗಿ • ಯಾದಗಿರಿ • ರಾಯಚೂರು • ಕೊಪ್ಪಳ • ಬಳ್ಳಾರಿ • ಬಾಗಲಕೋಟೆ • ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No. BDR/054/2024-2026 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 337 | PAGE- ಪುಟ 8 | ಮಂಗಳವಾರ 07.01.2025 ಬೀದರ | RNI NO:KARKAN/2011/48371 | RS.ಬೆಲೆ 2/-



ಹುಮನಾಬಾದ್: ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಹಾಗೂ ಶ್ರೀ ಮಾಣಿಕ ಪ್ರಭು ಪತ್ತಿನ ಸೌಹಾರ್ದ ಸಹಕಾರಿಯ ಕ್ಯಾಲೆಂಡರ್ ನ್ನು ಮಾಜಿ ಸಚಿವ ರಾಜಶೇಖರ ಪಾಟೀಲ ಬಿಡುಗಡೆಗೊಳಿಸಿದರು

## ಶಕ್ತಿ ಯೋಜನೆ: ಕ.ಕ. ಸಾರಿಗೆ ಸಂಸ್ಥೆಯಲ್ಲಿ 52.94 ಕೋಟಿ ಮಹಿಳೆಯರ ಪ್ರಯಾಣ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.6(ಕರ್ನಾಟಕ ವಾರ್ತೆ) ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯೋಜನೆಯಾದ "ಶಕ್ತಿಯೋಜನೆ"ಯಡಿಕಲ್ಯಾಣ ಕರ್ನಾಟಕರಸ್ತೆಸಾರಿಗೆಸಂಸ್ಥೆ ವ್ಯಾಪ್ತಿಯಲ್ಲಿ ಇದೂವರೆಗೆ 52.94ಮಹಿಳೆಯರು ಉಚಿತ ಪ್ರಯಾಣ ಬೆಳೆಸಿದ್ದಾರೆ ಎಂದು ಸಂಸ್ಥೆಯವ್ಯವಸ್ಥಾಪಕನಿರ್ದೇಶಕ ಎಂ.ರಾಚಪ್ಪ ತಿಳಿಸಿದ್ದಾರೆ.

ಉಚಿತ ಪ್ರಯಾಣದ ಈ ಯೋಜನೆ 2023ರ ಜೂನ್ 11 ರಿಂದ ರಾಜ್ಯದಾದ್ಯಂತ ಜಾರಿಗೆ ಬಂದಿದ್ದು, ಕಳೆದ ಡಿಸೆಂಬರ್ 31ರ ವರೆಗೆ 52.94 ಕೋಟಿ ಮಹಿಳಾ ಫಲಾನುಭವಿಗಳು ಇದರ ಲಾಭ ಪಡೆದುಕೊಂಡಿದ್ದಾರೆ. ಉಚಿತ ಪ್ರಯಾಣದ ಒಟ್ಟಾರೆ ವೆಚ್ಚ 1,774 ಕೋಟಿ ರೂ. ಆಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಶಕ್ತಿಯೋಜನೆ ಜಾರಿಯಿಂದ ಮಹಿಳೆಯರ ಪ್ರಯಾಣದ ಪ್ರಮಾಣಹೆಚ್ಚಳಗೊಂಡಿದ್ದರಿಂದ ಪ್ರಯಾಣಿಕರ ಅನುಕೂಲಕ್ಕಾಗಿ 974ವೇಗದೂತವಾಹನಗಳನ್ನು ಹೊಸದಾಗಿ ನಿಗಮಕ್ಕೆ

(2ನೇ ಪುಟ ನೋಡಿ)

# ಎಚ್‌ಎಂಪಿ ವೈರಸ್

## ಆತಂಕ ಬೇಡ : ಸಚಿವ ಡಾ.ಶರಣಪ್ರಕಾಶ್ ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.6:ಹೊಸದಾಗಿ ಹರಡುತ್ತಿರುವ ಹ್ಯೂಮನ್ ಮೇಟಾನ್ಯುಮೋ ವೈರಸ್ (ಊಒಕಗಿ)ನಿಂದಾಗಿ ರಾಜ್ಯದ ಜನರು ಭಯಪಡುವ ಅಗತ್ಯವಿಲ್ಲ ಎಂದು ವೈದ್ಯಕೀಯ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ತುರ್ತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಎರಡು ಪ್ರಕರಣಗಳು ಪತ್ತೆಯಾಗಿವೆ, ಅದರಲ್ಲಿ 3 ತಿಂಗಳ ಮಗು ಈಗಾಗಲೇ ಡಿಸ್ಚಾರ್ಜ್ ಆಗಿದೆ, 8 ತಿಂಗಳ ಮಗು ಚೇತರಿಸಿಕೊಳ್ಳುತ್ತಿದೆ,ಹಾಗಾಗಿ ವೈರಸ್ ಹರಡುವುದಕ್ಕಿಂತ ಮುಂಚೆಯೇ ಅದನ್ನು ತಡೆಯಲು



ನಾವು ಎಲ್ಲಾ ರೀತಿಯಲ್ಲಿ ಸಿದ್ದತೆ ಮಾಡಿಕೊಂಡಿದ್ದೇವೆ. ಸಣ್ಣ ಪ್ರಮಾಣದ ಸೋಂಕಿನ ಲಕ್ಷಣಗಳು ಕಂಡು ಬಂದಲ್ಲಿ ಸಮೀಪದ ಆಸ್ಪತ್ರೆಗೆ ಹೋಗಬೇಕು ಎಂದು ತಿಳಿಸಿದರು.

ಊಒಕಗಿ ವೈರಸ್ ತಡೆಗಟ್ಟಲು ಮುಂಜಾಗ್ರತೆಗಾಗಿ ಈಗಾಗಲೇ ಸಭೆಗಳನ್ನು ನಡೆಸಲಾಗಿದೆ, ಸಿರಿಯಸ್ ಪ್ರಕರಣಗಳು ಕಂಡುಬಂದಲ್ಲಿ ಮಲ್ಟಿಪ್ಲೆಕ್ಸ್ ಪಿಸಿಆರ್ ಟೆಸ್ಟ್ ಮಾಡುವುದಕ್ಕೂ ನಮ್ಮಲ್ಲಿ ಸೌಲಭ್ಯವಿದೆ. ಅವಶ್ಯಕತೆ ಇದ್ದಲ್ಲಿ ಮಾತ್ರ ಈ ಪರೀಕ್ಷೆ ನಡೆಸಲಾಗುವುದು. ಇದಕ್ಕೆ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆ ಸನ್ನದ್ಧವಾಗಿದೆ ಎಂದರು.

ಕೋವಿಡ್ ಸೋಂಕಿನಂತೆ ಈ ವೈರಸ್ ಕೂಡ ನೆಗಡಿ, ಕೆಮ್ಮು, ಜ್ವರ ಸೇರಿದಂತೆ ಮತ್ತಿತರ ಲಕ್ಷಣಗಳಿಂದ ಕೂಡಿದ್ದು, ಈ ತರಹದ ಲಕ್ಷಣಗಳು ಕಂಡು ಬಂದಲ್ಲಿ ಸೋಂಕಿತರು ಸ್ವಯಂ ಐಸೋಲೇಶ್ ನ್ ಗೆ ಒಳಗಾಗಬೇಕು.

ಒಂದು ವೇಳೆ ಅವಶ್ಯ ಬಿದ್ದರೆ ಮನೆಯಲ್ಲೇ ಚಿಕಿತ್ಸೆ ಕೊಡಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

> ನೆಗಡಿ, ಕೆಮ್ಮು ಮತ್ತಿತರ ಪ್ರಾಥಮಿಕ ಸೋಂಕಿನ ಲಕ್ಷಣಗಳು ಇದ್ದವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸೋಂಕಿತರು ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಹೋಗುವುದನ್ನು ಕಡಿಮೆ ಮಾಡಬೇಕು. ಮನೆಯಲ್ಲೇ ಚಿಕಿತ್ಸೆ ಪಡೆಯಬೇಕು.:
> ಡಾ.ಶರಣಪ್ರಕಾಶ್ ಪಾಟೀಲ್
> (ವೈದ್ಯಕೀಯ ಶಿಕ್ಷಣ ಸಚಿವರು)


## ಬಿಜೆಪಿ - ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಮುಸುಕಿನ ಗುದ್ದಾಟ

(ಮಲ್ಲಮ್ಮ ನುಡಿ ವಾರ್ತೆ)

ಚಿಟಗುಪ್ಪ: ಜ.6 ಇಲ್ಲಿಯ ಪಿಕೆಪಿಎಸ್ ಚುನಾವಣಾ ಮತ ಎಣಿಕೆ ಕೇಂದ್ರವಾದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯ ಮುಂಭಾಗದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿಯಿಂದ ಹೊಡೆದಾಡುವ ಹಂತಕ್ಕೆ ತಲುಪಿದಾಗ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದರೂಸಾಧ್ಯವಾಗಲಿಲ್ಲ. ಪೊಲೀಸರು ಲಾಠಿ ಪ್ರಹಾರ ನಡೆಸಿ ಎರಡು

ಪಕ್ಷಗಳ ಕಾರ್ಯಕರ್ತರ ಗುಂಪುಗಳನ್ನು ಹಿಂದಟ್ಟಿ ಶಾಂತಗೊಳಿಸಿದರು.

## ಭಯಪಡುವ ಅಗತ್ಯವಿಲ್ಲ, HMPV ಕೋವಿಡ್‌ನಂತೆ ಹರಡಲ್ಲ: ಆರೋಗ್ಯ ಇಲಾಖೆ



ಬೆಂಗಳೂರು:ಜ.6: ರಾಜ್ಯದಲ್ಲಿ ಎರಡು ಹ್ಯೂಮನ್ ಮೆಟಾನ್ಯೂಮೊ ವೈರಸ್ (ಎಚ್‌ಎಂಪಿವಿ) ಪ್ರಕರಣಗಳು ಪತ್ತೆಯಾಗಿರುವುದು ಜನರಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ. ಹೀಗಾಗಿ, ಭಯಪಡುವ ಅಗತ್ಯವಿಲ್ಲ ಎಂದು ತಜ್ಞರು ತಿಳಿಸಿದ್ದಾರೆ. ಜನರು ಭಯಭೀತರಾಗಬೇಡಿ,ಏಕೆಂದರೆ ಈ ವೈರಸ್ ಕೋವಿಡ್–19 ರಂತೆ ಹರಡುವುದಿಲ್ಲ ಎಂದು ಸೋಮವಾರ ರಾಜ್ಯ ಸರ್ಕಾರ ತಿಳಿಸಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ (ಡಿಎಂಇ) ಪ್ರಕಟಣೆ ನೀಡಿದ್ದು, ಈ ವೈರಸ್ ಪ್ರಾಥಮಿಕವಾಗಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ ಮತ್ತು ನೆಗಡಿಯಂತೆ–ಯೇ ಸೋಂಕುಗಳನ್ನು ಉಂಟುಮಾಡುತ್ತದೆ ಎಂದು ಒತ್ತಿಹೇಳಿದೆ. ಅಲ್ಲದೆ, ಇನ್ಫ್ಲುಯೆನ್ಜಾ

(2ನೇ ಪುಟ ನೋಡಿ)

**ವೈರಸ್ ಹರಡುವಿಕೆಯನ್ನು ತಡೆಯಲು ಏನು ಮಾಡಬೇಕು?**

* ಕೆಮ್ಮುವಾಗ ಅಥವಾ ಸೀನುವಾಗ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳಬೇಕು.
* ಆಗಾಗ್ಗೆ ಕೈಗಳನ್ನು ಸಾಬೂನಿನಿಂದ ತೊಳೆಯಬೇಕು.
* ಜ್ವರ, ಕೆಮ್ಮು ಮತ್ತು ಸೀನುವಿಕೆ ಇದ್ದಲ್ಲಿ ಸಾರ್ವಜನಿಕ ಸ್ಥಳಗಳಿಂದ ದೂರವಿರಬೇಕು.
* ಅನಾರೋಗ್ಯ ಪೀಡಿತ ವ್ಯಕ್ತಿಗಳೊಂದಿಗಿನ ನಿಕಟ ಸಂಪರ್ಕದಿಂದ ದೂರವಿರಬೇಕು.

**ವೈರಸ್ ಹರಡುವಿಕೆ ತಡೆಯಲು ಏನು ಮಾಡಬಾರದು?**

* ಟಿಶ್ಯೂ ಪೇಪರ್‌ಗಳು ಅಥವಾ ಕರವಸ್ತ್ರಗಳನ್ನು ಮರುಬಳಕೆ ಮಾಡಬೇಡಿ.
* ಟವೆಲ್ ಮತ್ತು ಲಿನಿನ್ ಬಟ್ಟೆಯನ್ನು ಇತರರೊಂದಿಗೆ ಹಂಚಿಕೊಳ್ಳಬೇಡಿ
* ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬೇಡಿ
* ಕಣ್ಣು, ಮೂಗು ಮತ್ತು ಬಾಯಿಯನ್ನು ಸ್ಪರ್ಶಿಸಬೇಡಿ.

## ಬೆಳೆ ನಾಶ:ವಿಷ ಕುಡಿದು ರೈತನ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ : ಜ.6:ತನ್ನ ಜಮೀನಿನಲ್ಲಿ ಬಿತ್ತಿದ ಬೆಳೆ ಸಂಪೂರ್ಣ ನಾಶವಾಗಿದ್ದಕ್ಕೆ ಮನನೊಂದ ರೈತನೋರ್ವ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಆಳಂದ ತಾಲ್ಲೂಕಿನ ಮಾಡಿಯಾಳ ಗ್ರಾಮದಲ್ಲಿ ನಡೆದಿದೆ.

ಭೀಮರಾವ್ ಪ್ರಭು ಸಲಗರ್(29) ಮೃತ ರೈತನಾಗಿದ್ದಾನೆ. ಭೀಮರಾವ್ ಲಕ್ಷಾಂತರ ರೂ. ಸಾಲ ಮಾಡಿಕೊಂಡು 8 ಎಕರೆ 20 ಗುಂಟೆ ಜಮೀನಿನಲ್ಲಿ ತೊಗರಿ, ಉದ್ದು, ಮೆಣಸಿನಕಾಯಿ, ಉಳ್ಳಾಗಡ್ಡಿ ಬೆಳೆಗಳನ್ನು ಬಿತ್ತಿದ್ದು, ಸರಿಯಾದ ಸಮಯಕ್ಕೆ ಬೆಳೆ



ಬಾರದೆ ಹಾನಿಯಾಗಿದೆ. ಬ್ಯಾಂಕ್ ಮತ್ತು ಖಾಸಗಿಯಾಗಿ 11.50 ಲಕ್ಷ ರೂ. ಸಾಲ ಮಾಡಿದ್ದ ಸಲಗರ್ ಸಾಲ ತೀರಿಸುವುದು ಹೇಗೆಂದು ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ತಿಳಿದುಬಂದಿದೆ.

ಈ ಕುರಿತು ನಿಂಬರ್ಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ

(2ನೇ ಪುಟ ನೋಡಿ)

## ಗುಣಮಟ್ಟದ ವೈದ್ಯಕೀಯ ಸೇವೆ ನೀಡಿ : ಸಚಿವ ದರ್ಶನಾಪೂರ



(ಮಲ್ಲಮ್ಮ ನುಡಿ ವಾರ್ತೆ)
ಎಂ. ರಫೀಕ್ ಪಟೇಲ್

ಯಾದಗಿರಿ:ಜ.6:ರಾಜ್ಯದಗಡಿ ಭಾಗಕ್ಕೆ ಹೊಂದಿಕೊಂಡಿರುವ ಗಿರಿ ಜಿಲ್ಲೆಯಲ್ಲಿ ಸರ್ಕಾರ ಎಲ್ಲಾ ಕ್ಷೇತ್ರಗಳ ಪ್ರಗತಿಗೆ ಶ್ರಮಿಸುತ್ತಿದೆ, ಆರೋಗ್ಯ ಇಲಾಖೆಯಲ್ಲಿ ಬದಲಾವಣೆ ತರುವುದು ಅವಶ್ಯಕವಾಗಿದೆ, ಕಾರಣ ಗ್ರಾಮೀಣ ಭಾಗದಿಂದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಆಗಮಿಸುವ ರೋಗಿಗಳಿಗೆ ವೈದ್ಯರು ಕಾಳಜಿಯಿಂದ ಗುಣಮಟ್ಟದ ವೈದ್ಯಕೀಯ ಸೇವೆ ನೀಡಬೇಕು, ಅಂದಾಗ ಮಾತ್ರ

(2ನೇ ಪುಟ ನೋಡಿ)

## ನಾಲ್ವರು ದರೋಡೆಕೋರರ ಬಂಧನ



ಮಲ್ಲಮ್ಮ ನುಡಿ ವಾರ್ತೆ
(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ:ಜ.6: ತಾಲ್ಲೂಕಿನ ಬಾಜೋಳಗಾ–ದಾಡಗಿ ರಸ್ತೆಯ ದಾಡಗಿ ಗ್ರಾಮ ಸಮೀಪ ದರೋಡೆಗೆ ಆಯುಧಗಳೊಂದಿಗೆ ನಿಂತಿದ್ದ ನಾಲ್ವರು ದರೋಡೆಕೋರರನ್ನು ಭಾನುವಾರ ಖಟಕಚಿಂಚೋಳಿ ಪಿಎಸ್ಐ ಸುದರ್ಶನ ರೆಡ್ಡಿ ನೇತೃತ್ವದ ತಂಡ ದಾಳಿ ನಡೆಸಿ ಬಂಧಿಸಿದ್ದಾರೆ.

ಓರ್ವ ಆರೋಪಿ ತಪ್ಪಿಸಿಕೊಂಡಿದ್ದಾನೆ. ಬಂಧಿತ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ಬಂಧಿತ ಆರೋಪಿಗಳಿಂದ 02 ಬಡಿಗೆ, ಚಾಕು, ಕಬ್ಬಿಣದ ಪೈಪ್, ಖಾರದ ಪಾಕೆಟ್, ಹಗ್ಗ ಜಪ್ತಿ ಮಾಡಲಾಗಿದೆ.

ಬೀದರ್ ಪೊಲೀಸ್ ಕಂಟ್ರೋಲ್ ರೂಂನಿಂದ ಕೆಲಜನರು ದರೋಡೆ ಮಾಡಲು ಆಯುಧಗಳನ್ನು ಹಿಡಿದುಕೊಂಡು ನಿಂತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ದರೋಡೆಕೋರರ ಮೇಲೆ ದಾಳಿ ನಡೆಸಲಾಗಿತ್ತು.

ಈ ಸಂಬಂಧ ಖಟಕಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಾಲೆ ಬಿಟ್ಟ 36 ಮಕ್ಕಳನ್ನು ರಕ್ಷಿಸಿ ಪುನಃ ಶಾಲೆಗೆ ದಾಖಲಿಸಲು ಕ್ರಮ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.06:ಮಕ್ಕಳನ್ನು ಶಾಲೆಬಿಡಿಸಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಲು ಕರೆದುಕೊಂಡು ಹೋಗುತ್ತಿದ್ದ 06 ವಾಹನಗಳ ಮಾಲೀಕರು ಹಾಗೂ ಚಾಲಕರ ವಿರುದ್ಧ ಕ್ರಮ ವಹಿಸಲಾಗಿದೆ.

ಜ.06ರ ಸೋಮವಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಶಿಕ್ಷಣ ಇಲಾಖೆ ಮತ್ತು ಪೊಲೀಸ್ ಇಲಾಖೆಯಿಂದ ಹಠಾತ್ ದಾಳಿ ನಡೆಸಿ 36 ಮಕ್ಕಳನ್ನು ರಕ್ಷಿಸಿ ಮಕ್ಕಳು ಓದುತ್ತಿದ್ದ ಶಾಲೆಗಳಿಗೆ ಪುನಃ ದಾಖಲಿಸಲಾಗಿದೆ.

ದೇವದುರ್ಗ ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ, ದೇವದುರ್ಗ ಟ್ರಾಫಿಕ್ ಪಿ.ಎಸ್.ಐ, ನಾರಾಯಣ, ಎ.ಎಸ್.ಐ ಗೋಪಾಲ, ಶಿಕ್ಷಣ ಇಲಾಖೆಯ ಇ.ಸಿ.ಓಗಳಾದ ರಾಜನಗೌಡ, ಮಹಾದೇವಪ್ಪ, ಬಿ.ಆರ್.ಪಿಗಳಾದ ಶರಣಪ್ಪ, ಸುರೇಶ, ಟಿ.ಎ.ಮನೋಹರ ಶಾಸ್ತ್ರಿ ಹಾಗೂ ಸಿ.ಆರ್.ಪಿಗಳಾದ ಮಹಾದೇವಪ್ಪ, ಬಾಬು ಹಡಗಲಿ, ಬಸವರಾಜ್, ವೀರಭದ್ರಯ್ಯ, ವೆಂಕಟಾಂಜನೇಯ, ಅಂಬಣ್ಣ ಮದಾಳೆ ಸೇರಿದಂತೆ ಇನ್ನಿತರರು ಜಿಲ್ಲೆಯ ದೇವದುರ್ಗದ ಹೊರವಲಯದ ಸಿರವಾರ ಕ್ರಾಸ್ ಹಾಗೂ ಕೊಪ್ಪರ ಕ್ರಾಸ್ ಸೇರಿದಂತೆ ಇತರೆ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ಮಕ್ಕಳನ್ನು ರಕ್ಷಿಸಿ ಉತ್ತಮ ಕಾರ್ಯ ಮಾಡಿದ್ದಾರೆ.

ಈ ವೇಳೆ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ನಿರ್ದೇಶಕರಾದ ಮಂಜುನಾಥ ರೆಡ್ಡಿ ಮಾತನಾಡಿ, 14 ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ಸಂಪೂರ್ಣವಾಗಿ



ನಿಷೇಧಿಸಲಾಗಿದೆ. 14 ವರ್ಷ ಮೇಲ್ಪಟ್ಟು 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ವೃತ್ತಿ ಮತ್ತು ಪ್ರಕ್ರಿಯೆಗಳಲ್ಲಿ ನಿಷೇಧಿಸಲಾಗಿದ್ದು, ಒಂದು ವೇಳೆ ಕೆಲಸಕ್ಕೆ ನೇಮಿಸಿಕೊಂಡಲ್ಲಿ ತಪ್ಪಿತಸ್ಥ ಮಾಲೀಕರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಮಕ್ಕಳನ್ನು ಶಾಲೆ ಬಿಡಿಸಿ, ಸರಕು ಸಾಗಾಣಿಕೆ ವಾಹನಗಳಲ್ಲಿ ಸಾಗಾಣಿಕೆ ಮಾಡಿಕೊಂಡು ಹೋಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಬಾರದು. ಒಂದು ವೇಳೆ ಇದೇ ರೀತಿ ಮುಂದುವರೆದಲ್ಲಿ ಪೊಲೀಸ್ ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳು ಇನ್ನು ಹೆಚ್ಚಿನ ಕಠಿಣ ಕ್ರಮ ಕೈಗೊಳ್ಳುತ್ತಾರೆ ಎಂದರು.

ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ 2016ರಂತೆ 14 ವರ್ಷದೊಳಗಿನ ಮಕ್ಕಳ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

# ಪುನಃ ಶಾಲೆಗೆ ದಾಖಲಿಸಲು ಕ್ರಮ

ದುಡಿಮೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹಾಗೂ 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಒಂದು ವೇಳೆ ದುಡಿಸಿಕೊಂಡಲ್ಲಿ 50,000 ರೂ. ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ಇರುತ್ತದೆ. ವಾಹನಗಳಲ್ಲಿ ಮಕ್ಕಳನ್ನು ಕೃಷಿ ಚಟುವಟಿಕೆಗಳಿಗಾಗಿ ಅಕ್ರಮ ಮತ್ತು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ದುಡಿಯುವ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ–1098 ಗೆ ಮಾಹಿತಿ ನೀಡಬಹುದಾಗಿದೆ ಎಂದರು.

# ಕೋವಿಡ್‌ನಂತೆ ಹರಡಲ್ಲ: ಆರೋಗ್ಯ ಇಲಾಖೆ

ತರಹದ ಅನಾರೋಗ್ಯ (ಐಎಲ್‌ಐ) ಮತ್ತು ತೀವ್ರತರವಾದ ಉಸಿರಾಟದ ಸೋಂಕು (ಎಸ್‌ಎಆರ್‌ಐ) ಪ್ರಕರಣಗಳು ಕಂಡುಬಂದರೆ ವರದಿ ಮಾಡುವಂತೆ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದೆ.ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಪ್ರಕಾರ, HMPV ವೈರಸ್ ಕೆಮ್ಮು, ಜ್ವರ, ಮೂಗು ಕಟ್ಟಿಕೊಳ್ಳುವುದು ಮತ್ತು ಉಸಿರಾಟದ ತೊಂದರೆ ಸೇರಿದಂತೆ ಫ್ಲೂ ತರಹದ ಲಕ್ಷಣಗಳನ್ನು ಉಂಟುಮಾಡುತ್ತದೆ. ಗಂಭೀರ ಪ್ರಕರಣಗಳಲ್ಲಿ ಇದು ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾಕ್ಕೆ ಕಾರಣವಾಗಬಹುದು. ವಿಶೇಷವಾಗಿ ಚಿಕ್ಕ ಮಕ್ಕಳು, ವೃದ್ಧರು ಮತ್ತು ರೋಗನಿರೋಧಕ ಶಕ್ತಿಯನ್ನು ಹೊಂದಿರದ ವ್ಯಕ್ತಿಗಳಲ್ಲಿ ಕಂಡುಬರುತ್ತದೆ.ಎಚ್‌ಎಂಪಿ ವೈರಸ್ ಉಸಿರಾಟದ ಡ್ರಾಪ್ಲೆಟ್ಸ್, ನಿಕಟ ಸಂಪರ್ಕ ಮತ್ತು ವೈರಸ್‌ನಿಂದ ಕಲುಷಿತಗೊಂಡ ಮೇಲ್ಮೈಗಳನ್ನು ಸ್ಪರ್ಶಿಸುವುದು ಮತ್ತು ನಂತರ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಮುಟ್ಟಿಕೊಳ್ಳುವುದರಿಂದ ಹರಡುತ್ತದೆ ಎಂದು ಅದು ಹೇಳಿದೆ.HMPV ಗೆ ಯಾವುದೇ ನಿರ್ದಿಷ್ಟ ಆಂಟಿವೈರಲ್ ಚಿಕಿತ್ಸೆ ಅಥವಾ ಲಸಿಕೆ ಇಲ್ಲ. ಸೋಂಕು ತಗುಲಿದವರ ಚಿಕಿತ್ಸೆಯಲ್ಲಿ ವಿಶ್ರಾಂತಿ, ಹೆಚ್ಚಿನ ನೀರು ಕುಡಿಯುವುದು ಮತ್ತು ನೋವು, ಜ್ವರ ಮತ್ತು ಮೂಗು ಕಟ್ಟಿಕೊಳ್ಳುವಿಕೆಗಾಗಿ ತೆಗೆದುಕೊಳ್ಳುವ ಔಷಧಿಗಳನ್ನೇ ರೋಗಲಕ್ಷಣಗಳನ್ನು ನಿವಾರಿಸಲು ಬಳಸಲಾಗುತ್ತದೆ. ಕೆಲವು ಗಂಭೀರ ಪ್ರಕರಣಗಳಲ್ಲಿ ಆಕ್ಸಿಜನ್ ಥೆರಪಿ ಅಥವಾ ಐವಿ ದ್ರಾವಣಗಳಿಗಾಗಿ ಆಸ್ಪತ್ರೆಗೆ ತೆರಳ ಬೇಕಾಗಬಹುದು ಎಂದಿದೆ.

# 52.94 ಕೋಟಿ ಮಹಿಳೆಯರ ಪ್ರಯಾಣ

ಸೇರ್ಪಡಿಸಿಕೊಳ್ಳಲಾಗಿದೆ. 636 ಅನುಸೂಚಿಗಳನ್ನು ಹಾಗೂ 4,568 ಸರತಿಗಳನ್ನು ಹೆಚ್ಚಿಸಿ ಬಸ್ ಕಾರ್ಯಾಚರಣೆ ಮಾಡಲಾಗಿದೆ.ಇದಲ್ಲದೆ ಸಾರಿಗೆ ಸಮಸ್ಯೆ ಕುರಿತು ಎಲ್ಲಾ ವಿಭಾಗಗಳಿಂದ ಪ್ರತಿ ತಿಂಗಳು ಫೋನ್–ಇನ್– ಕಾರ್ಯಕ್ರಮ ಆಯೋಜಿಸಿ ಸಾರಿಗೆ ಸೌಲಭ್ಯದ ಬಗ್ಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅದರಂತೆ ಸಮಸ್ಯೆ ಬಗೆಹರಿಸುವ ಕ್ರಮ ವಹಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

# ರೈತನ ಆತ್ಮಹತ್ಯೆ

ದಾಖಲಾಗಿದೆ.ಪರಿಹಾರಕ್ಕೆ ಒತ್ತಾಯ:ಸಾಲಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಂಡಿದ್ದು ಕುಟುಂಬ ಸಂಕಷ್ಟದಲ್ಲಿದೆ. ಕೂಡಲೇ ಕೇಂದ್ರ ಮತ್ತು ರಾಜ್ಯ ಸರಕಾರಗಳು 10 ಲಕ್ಷ ರೂ. ಪರಿಹಾರ ಘೋಷಣೆ ಮಾಡಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾಧ್ಯಕ್ಷ ಭೀಮಾಶಂಕರ ಮಾಡಿಯಾಳ ಒತ್ತಾಯಿಸಿದ್ದಾರೆ.

# ಗುಣಮಟ್ಟದ ವೈದ್ಯಕೀಯ ಸೇವೆ ನೀಡಿ

ನಿಮಗೂ ಹಾಗೂ ನಮಗೆ ಒಳ್ಳೆಯ ಹೆಸರು ಬರಲು ಸಾಧ್ಯ ಎಂದು ರಾಜ್ಯ ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಶರಣಬಸಪ್ಪ ದರ್ಶನಾಪೂರ ಹೇಳಿದರು.ನಗರದ ಹೊರ ವಲಯದಲ್ಲಿರುವ ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 2024–25ನೇ ಸಾಲಿನ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದ ದೀಪದಾರೆ ಮತ್ತು ಪ್ರತಿಜ್ಞಾಸ್ವೀಕಾರ, ರಕ್ತನಿಧಿ ಕೇಂದ್ರ ಹಾಗೂ ಲಾಂಡ್ರಿ ಬ್ಲಾಕ್ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಾಗಿ 14 ವರ್ಷ ಕಳೆದಿದೆ, ಜಿಲ್ಲೆಯ ರೋಗಿಗಳು ಈ ಮೊದಲು ಹೆಚ್ಚಿನ ಚಿಕಿತ್ಸೆಗಾಗಿ ನೆರೆಯ ರಾಯಚೂರ–ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದರು, ಇಲ್ಲಿ ಈಗಾಗಲೇ ಸರ್ಕಾರ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ, ಕಾರಣ ವೈದ್ಯರು ಹಾಗೂ ಸಿಬ್ಬಂದಿಗಳು ಸಕಾಲಕ್ಕೆ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ ರೋಗ ಗುಣಪಡಿಸಿದರೇ ಅವರು ಆರ್ಥಿಕ ಸಂಕಷ್ಟದಿಂದ ಪಾರಾಗುತ್ತಾರೆ ಹಾಗೂ ಆರೋಗ್ಯದಿಂದ ಜೀವನ ನಡೆಸುತ್ತಾರೆ ಎಂದು ಸಲಹೆ ನೀಡಿದರು.ಈ ಮೊದಲು ಜಿಲ್ಲಾ ಕೇಂದ್ರದಲ್ಲಿ ರಕ್ತನಿಧಿ ಘಟಕ ಇಲ್ಲದಿರುವುದು ರೋಗಿಗಳಿಗೆ ಚಿಕಿತ್ಸೆ ನೀಡಲು ವೈದ್ಯರಿಗೆ ತೊಂದರೆಯಾಗುತ್ತಿತ್ತು, ಯಿಮ್ಸ್ ಡೀನ್ ಅವರು ವಿಶೇಷ ಕಾಳಜಿವಹಿಸಿ, ರಕ್ತ ನಿಧಿ ಘಟಕ ಆರಂಭ ಹಾಗೂ ಲಾಂಡ್ರಿ ಬ್ಲಾಕ್ ಆರಂಭಿಸಿದರಿಂದ ರೋಗಿಗಳಿಗೆ ತುರ್ತು ಸಂದರ್ಭದಲ್ಲಿ ಉತ್ತಮ ವೈದ್ಯಕೀಯ ಚಿಕಿತ್ಸೆ ದೊರೆತು ಅವರ ಪ್ರಾಣಗಳನ್ನು ರಕ್ಷಿಸಲು ಸಹಕಾರಿಯಾಗಲಿದೆ ಎಂದರು.ಈಗಾಗಲೇ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ, ಅವರಿಗೆ ಸೂಕ್ತ ವಸತಿಗೃಹ ಕೂಡ ವ್ಯವಸ್ಥೆ ಕಲ್ಪಿಸಲಾಗಿದೆ, ಪಕ್ಕದಲ್ಲಿಯೇ ಆಸ್ಪತ್ರೆ ಇರುವುದರಿಂದ ಕಲಿಕೆಗೆ ಸಹಕಾರಿಯಾಗಲಿದೆ, ಕಾರಣ ವಿದ್ಯಾರ್ಥಿಗಳು ಪರಿಶ್ರಮದಿಂದ ಅಭ್ಯಾಸ ಮಾಡಿ ನಿಮ್ಮ ತಂದೆ–ತಾಯಿಗಳ ಕನಸು ನನಸು ಮಾಡಿ ಮುಂದೆ ಸಮಾಜಕ್ಕೆ ನಿಮ್ಮದೇ ಕೊಡುಗೆ ನೀಡಿ ಎಂದು ಕರೆ ನೀಡಿದರು.

ಮೊದಲು ಆಸ್ಪತ್ರೆ ಹಾಗೂ ಕಾಲೇಜಿನಲ್ಲಿ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಪರಿಸರ ಸ್ವಚ್ಛತೆಗೆ ಆದ್ಯತೆ ನೀಡಬೇಕು, ಅಂದಾಗ ಮಾತ್ರ ಇದು ವಿದ್ಯಾರ್ಥಿಗಳ ಮೇಲೆ ಹಾಗೂ ರೋಗಿಗಳ ಮೇಲೆ ಒಳ್ಳೇಯ ಪರಿಣಾಮ ಬೀರುತ್ತದೆ, ಈ ನಿಟ್ಟಿನಲ್ಲಿ ಅಗತ್ಯ ಎಚ್ಚರಿಕೆ ವಹಿಸಿ ಎಂದು ಸೂಚಿಸಿದರು.ಯಾದಗಿರಿ ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ಮಾತನಾಡಿ, ಆರೋಗ್ಯ ಕ್ಷೇತ್ರಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಾಕಷ್ಟು ಅನುದಾನ ಬಿಡುಗಡೆ ಮಾಡಿದೆ, ರೋಗಿಗಳಿಗೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜಿಲ್ಲಾಡಳಿತ ಇನ್ನೂ ವಿಶೇಷ ಕ್ರೀಯಾಶೀಲವಾಗಿ ಕೆಲಸ ಮಾಡಿದಾಗ ಮಾತ್ರ ಜನರಿಗೆ ಅದರ ಲಾಭವಾಗಲಿದೆ ಎಂದು ಹೇಳಿದರು.ಪ್ರಾಸ್ತಾವಿಕವಾಗಿ ಯಿಮ್ಸ್ ಡೀನ್ ಡಾ. ಸಂದೀಪ್ ಪಾಟೀಲ್ ಹರಶಿಣಗಿ ಮಾತನಾಡಿ, ನಾವೂ ಇಲ್ಲಿರುವ ಸಮಸ್ಯೆಗಳನ್ನು ಅರಿತಿದ್ದೇವೆ, ಎಲ್ಲರ ಸಹಕಾರದಿಂದ ಹಂತ–ಹಂತವಾಗಿ ಪರಿಹಾರ ಮಾಡಿಕೊಂಡು ರೋಗಿಗಳಿಗೆ ಔತನ್ಯ ಚಿಕಿತ್ಸೆ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದು ತಿಳಿಸಿದರು.ಸಮಾರಂಭದಲ್ಲಿ ಜಿಲ್ಲಾಧಿಕಾರಿ ಡಾಕ್ಟರ್ ಸುಶೀಲಾ ಬಿ, ಸಿಇಓ ರವೀಶ್ ಒರಡಿಯ ,ಗುರುಮಿಠಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ, ಡಿಹೆಚ್‌ಓ ಡಾ. ಮಹೇಶ ಬಿರಾದಾರ, ಜಿಲ್ಲಾಸ್ಪತ್ರೆ ಮುಖ್ಯಸ್ಥೆ ಡಾ. ರಿಜ್ವಾನಾ ಸಾಜೀದ್, ಡಾ. ಪಂಪಾರಡ್ಡಿ, ಮುದ್ನಾಳ ಗ್ರಾ.ಪಂ ಅಧ್ಯಕ್ಷೆ ಮೇನಕಾ ವಿನೋಧ ರಾಠೊಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ರಾಜಕೀಯ ಮುಖಂಡರೊಂದಿಗೆ ಸಭೆ: ಅಂತಿಮ ಮತದಾರರ ಪಟ್ಟಿ ಪ್ರಕಟ,ಜಿಲ್ಲೆಯಲ್ಲಿ 23,40,518 ಜನ ಮತದಾರರು-ಬಿ.ಫೌಜಿಯಾ ತರನ್ನುಮ್

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಜ.6– ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ದಿ.01–01–2025 ಅರ್ಹತಾ ದಿನಾಂಕವನ್ನಾಗಿ ಪರಿಗಣನೆಗೆ ತೆಗೆದುಕೊಂಡು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ–2025ರ ಅಂತಿಮ ಮತದಾರರ ಪಟ್ಟಿ ಸೋಮವಾರ ಪ್ರಕಟ ಮಾಡಲಾಗಿದ್ದು, ಜಿಲ್ಲೆಯಾದ್ಯಂತ 11,76,170 ಪುರುಷ, 11,64,009 ಮಹಿಳೆ ಹಾಗೂ 339 ತೃತೀಯಲಿಂಗಿಗಳು ಸೇರಿದಂತೆ ಒಟ್ಟು 23,40,518 ಮತದಾರರು ಪಟ್ಟಿಯಲ್ಲಿ ಹೆಸರು ನೊಂದಾಯಿಸಿಕೊಂಡಿದ್ದಾರೆ ಎಂದು ಕಲಬುರಗಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಭೆ ನಡೆಸಿದ ಅವರು, ಅಂತಿಮ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಕಲಬುರಗಿ ಮಹಾನಗರ ಪಾಲಿಕೆ ಕಚೇರಿ, ಸಹಾಯಕ ಆಯುಕ್ತರ ಕಚೇರಿ, ತಹಶೀಲ್ದಾರ ಕಚೇರಿ ಹಾಗೂ ಜಿಲ್ಲೆಯ ಎಲ್ಲಾ ಮತಗಟ್ಟೆ ಅಧಿಕಾರಿಗಳ ಕಾರ್ಯಾಲಯದಲ್ಲಿ ಸಾರ್ವಜನಿಕರ ಮಾಹಿತಿಗೆ ಪ್ರಕಟಿಸಲಾಗಿದೆ. ಇದಲ್ಲದೆ ಪಟ್ಟಿಯನ್ನು https://ceo.karnataka.nic.in ನಲ್ಲಿಯೂ ಪ್ರಚುರಪಡಿಸಲಾಗಿದೆ

## ರಾಯಚೂರಿನ ರಿಮ್ಸ್‌ನಲ್ಲಿ ಮತ್ತೋರ್ವ ಬಾಣಂತಿ ಸಾವು;ಜಿಲ್ಲೆಯಲ್ಲಿ ಮೃತರ ಸಂಖ್ಯೆ 12ಕ್ಕೆ ಏರಿಕೆ

ಮಲ್ಲಮ ನುಡಿ ವಾರ್ತೆ ರಾಯಚೂರು:ಜ.6:ಜಿಲ್ಲೆಯಲ್ಲಿ ಬಾಣಂತಿಯರ ಸಾವು ಮುಂದುವರಿದಿದ್ದು, ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮತ್ತೋರ್ವ ಬಾಣಂತಿ ಮೃತಪಟ್ಟಿದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಕಳೆದ 3 ತಿಂಗಳಿನಲ್ಲಿ ಮೃತಪಟ್ಟ ಬಾಣಂತಿಯರ ಸಾವಿನ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ದೇವದುರ್ಗ ತಾಲ್ಲೂಕಿನ ಹದ್ದಿನಾಳ ಗ್ರಾಮದ 24 ವರ್ಷದ ಸರಸ್ವತಿ ಎಂಬುವವರು ಸಾವಿಗೀಡಾಗಿದ್ದಾರೆ. ಜನವರಿ 2ರಂದು ರಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಈ ವೇಳೆ ಅವರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಜನವರಿ 5 ರಂದು ಕೊನೆಯುಸಿರೆಳೆದಿದ್ದಾರೆ.

ಸದ್ಯ ಮಗುವನ್ನು ತೀವ್ರ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಸರಸ್ವತಿ ಅವರು ನಾಲ್ಕನೇ ಮಗುವಿಗೆ ಜನ್ಮ ನೀಡಿ ಸಾವಿಗೀಡಾಗಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಸರಸ್ವತಿ ಅವರಿಗೆ ಹೆರಿಗೆ ಬಳಿಕ ರಕ್ತದೊತ್ತಡ ಹೆಚ್ಚಾಗಿದ್ದರಿಂದ ಚಿಕಿತ್ಸೆ ನೀಡಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅವರು ಭಾನುವಾರ ಮೃತಪಟ್ಟಿದ್ದಾರೆ ಎಂದು ರಿಮ್ಸ್‌ನ ವೈದ್ಯಕೀಯ ಅಧೀಕ್ಷಕ ಡಾ. ಭಾಸ್ಕರ್ ತಿಳಿಸಿದ್ದಾರೆ.

ರಿಮ್ಸ್ ಆಸ್ಪತ್ರೆಯಲ್ಲಿ 3 ತಿಂಗಳಲ್ಲಿ ಐವರು ಬಾಣಂತಿಯರು ಮೃತಪಟ್ಟಿದ್ದಾರೆ.

# ಬಸ್ ಪ್ರಯಾಣ ದರ ಹೆಚ್ಚಳ ಖಂಡಿಸಿ ಎಬಿವಿಪಿ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ ಬೀದರ:ಜ.6:ಕರ್ನಾಟಕ ರಾಜ್ಯ ಸರ್ಕಾರ ಬಸ್ ಪ್ರಯಾಣ ದರವನ್ನು 15% ರಷ್ಟು ಹೆಚ್ಚಳ ಮಾಡುವುದರ ಮೂಲಕ ಬಡ, ಕೂಲಿ ಕಾರ್ಮಿಕರು, ಮಧ್ಯಮವರ್ಗದ ಜನತೆಗೆ ಹೊರೆಯನ್ನ ಹೇರಿದಂತಾಗಿದೆ. ಸರ್ಕಾರಿ ಬಸ್‌ಗಳನ್ನೇ ಅವಲಂಬಿಸಿ ಸಾವಿರಾರು ಜನ ದಿನನಿತ್ಯ ತಮ್ಮ ಕೆಲಸ ಕಾರ್ಯಗಳಿಗೆ ಓಡಾಡುತ್ತಾರೆ. ಆದರೆ ಶೇಕಡಾ.15 ರಷ್ಟು ಬಸ್ ಪ್ರಯಾಣದರ ಹೆಚ್ಚಳ ಮಾಡುವುದರ ಮೂಲಕ ಆರ್ಥಿಕ ಹೊರೆಯನ್ನು ಜನಸಾಮಾನ್ಯರ ಮೇಲೆ ರಾಜ್ಯ ಸರ್ಕಾರ ಹಾಕುತ್ತಿದೆ.ಬಸ್‌ಗಳ ಸಂಖ್ಯೆ ಹೆಚ್ಚಿಸಿ – ಪ್ರಯಾಣ ದರವನ್ನಲ್ಲ.

ಶಕ್ತಿ ಯೋಜನೆಯಿಂದಾಗಿ ದಿನನಿತ್ಯ ಬಸ್ಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಇದೆ. ಆದರೆ ಬಸ್ಗಳ ಸಂಖ್ಯೆಯನ್ನು ಹೆಚ್ಚಳ ಮಾಡದೆ ದಿನನಿತ್ಯ ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ತೊಂದರೆಯುನ್ನುಂಟು ಮಾಡುತ್ತಿದೆ ವಿದ್ಯಾರ್ಥಿಗಳ ಶಾಲಾ–ಕಾಲೇಜಿಗೆ ಹೋಗುವ ಸಂದರ್ಭದಲ್ಲಿ ಹಲವಾರು ಬಸ್ಸುಗಳಲ್ಲಿ ಸ್ಥಳಾವಕಾಶ ಇಲ್ಲದೆ ಬಡ್ಗಳನ್ನ ನಿಲ್ಲಿಸಿದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದ–ರಿಂದ ಸರಿಯಾದ ಸಮಯಕ್ಕೆ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಆಗುತ್ತಿಲ್ಲ, ಸರ್ಕಾರ ಕೂಡಲೇ ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಿ ವಿದ್ಯಾರ್ಥಿಗಳ ಹಾಗೂ ಜನಸಾಮಾನ್ಯರ ಪ್ರಯಾಣಕ್ಕೆ ಅನುಕೂಲ ಮಾಡಬೇಕೆಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯ ಸರ್ಕಾರಕ್ಕೆ ಆಗ್ರಹಿಸುತ್ತದೆ ಇಂದು ನಗರದ ಹೊಸ ಬಸ್ಸ ನಿಲ್ದಾಣದಲ್ಲಿ ಬಸ್ ತಡೆ ಹಿಡಿದು ಪ್ರತಿಭಟಣೆ ಮಾಡುವ ಮೂಲಕ ಹಾಗೂ ವಿಭಾಗೀಯ ನಿಯಂತ್ರಣ ಅಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಎಬಿವಿಪಿ ನಗರ ಸಹ ಕಾರ್ಯದರ್ಶಿ ನಾಗರಾಜ ಸುಲ್ತಾನಪೂರೆ, ಜಿಲ್ಲಾ ವಿಧ್ಯಾರ್ಥಿನಿ ಪ್ರಮುಖ ಪ್ರಾರ್ಥನಾ ಮೆಳಕುಂದೆ, ತಾಲೂಕ ಸಂಚಲಕ್ ಮಹೇಶ್, ಪವನ್ ಕುಂಬಾರ್, ಪ್ರಭಾಕರ್, ಅಮರನಾಥ್, ಅತೀಶ್, ಸಾಯಿನಾಥ್, ವಿಶ್ವಾಸ್, ಮಮತಾ, ಕಾವೇರಿ ಹಾಗೂ ಅನೇಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿದ್ದರು.

## ಇಂದು ಅಂತಿಮ ಮತದಾರರ ಪಟ್ಟಿ ಪ್ರಕಟ: ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಲು ಸೂಚನೆ

ಮಲ್ಲಮ ನುಡಿ ವಾರ್ತೆ ಬೀದರ.ಜ.06:ಜಿಲ್ಲೆಯಾದ್ಯಂತ ಜನವರಿ 6 ರಂದು ಅಂತಿಮ ಮತದಾರರ ಪಟ್ಟಿಯನ್ನು ತಯ್ಯಾರಿಸಿ ಜಿಲ್ಲೆಯ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ, ತಹಸೀಲ್ ಕಛೇರಿ, ಸಹಾಯಕ ಆಯುಕ್ತರ ಕಛೇರಿ, ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿ ಹಾಗೂ ನಿಗದಿತ ಸ್ಥಳಗಳ ಸೂಚನಾ ಫಲಕಕ್ಕೆ ಅಚಿಟಿಸಿ ಪ್ರಚೂರ ಪಡಿಸಲಾಗಿರುತ್ತದೆ. ಕಾರಣ ಮತದಾರರು ತಮ್ಮ ಹೆಸರನ್ನು ಮತದಾರರ ಪಟ್ಟಿಗಳಲ್ಲಿ ಇರುವ ಬಗ್ಗೆ ಪರಿಶೀಲಿಸಿಕೊಳ್ಳಬೇಕೆಂದು ಬೀದರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ತಿಳಿಸಿದ್ದಾರೆ.

ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅರ್ಹತಾ ದಿನಾಂಕ 01.01.2025 ಕ್ಕೆ ಅನ್ವಯಿಸುವಂತೆ (Special Summary Revision of Photo Electoral rolls w.r.t 01.01.2025) ಅಂತಿಮ ಮತದಾರರ ಪಟ್ಟಿಯನ್ವಯ ಜಿಲ್ಲೆಯಲ್ಲಿ ಒಟ್ಟು 1446445 ಮತದಾರರು ಇದ್ದು, ಆ ಪೈಕಿ 740462 ಪುರುಷ ಮತದಾರರು, 705938 ಮಹಿಳಾ ಮತದಾರರು ಹಾಗೂ 45 ತೃತೀಯ ಲಿಂಗ ಮತದಾರರಿರುತ್ತಾರೆ.

ಅಂತಿಮ ಮತದಾರರ ಪಟ್ಟಿಯ ಅರ್ಹ ಮತದಾರರು ತಮ್ಮ ಹೆಸರನ್ನು Voters helpline App ಅಥವಾ ಆನ್‌ಲೈನ್ (https://voters.eci.gov.in) ಮೂಲಕ ಪರಿಶೀಲಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ ಹಾಗೂ ಅಂತಿಮ ಮತದಾರರ ಪಟ್ಟಿಯನ್ನು (https://ceo.karnataka.gov.in) & (https://bidar.nic.in) ರ ವೆಬ್‌ಸೈಟ್ ಮೂಲಕ ಡೌನ್‌ಲೋಡ ಮಾಡಿಕೊಂಡು ಪರಿಶೀಲಿಸಿಕೊಳ್ಳಬಹುದು. ಜಿಲ್ಲೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಅಂತಿಮ ಮತದಾರರ ಪಟ್ಟಿಯಂತೆ ಅಂಕಿ ಸಂಖ್ಯೆಗಳಿರುತ್ತವೆಂದು ಅವರು ತಿಳಿಸಿದ್ದಾರೆ.

# ಇಂದಿನಿಂದ ಜ. 20 ರವರೆಗೆ ಯುವನಿಧಿ ವಿಶೇಷ ನೋಂದಣಿ ಅಭಿಯಾನ

ಮಲ್ಲಮ್ಮ ನುಡಿ ವಾರ್ತೆ ಬೀದರ. ಜ.06: ಕರ್ನಾನಟಕ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯವನಿಧಿ ಯೋಜನೆಯ ವಿಶೇಷ ನೋಂದಣಿ ಅಭಿಯಾನವನ್ನು ಜನವರಿ.6 ರಿಂದ ಜನವರಿ.20 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವನಿಧಿ ಯೋಜನೆಯು ನಿರುದ್ಯೋಗ ಯವಕ/ಯುವತಿಯರಿಗೆ ಮಾಸಿಕ ನಿರುದ್ಯೋಗ ಭತ್ಯೆ ನೀಡುವ ಮಹಾದಾಸೆಯಿಂದ ಅನುಷ್ಠಾನಗೊಂಡ ಯೋಜನೆಯಾಗಿದೆ. ಪದವಿ ಪಾಸಾದ ಅಭ್ಯರ್ಥಿಗಳಿಗೆ 3000 ರೂ. ಡಿಪ್ಲೋಮಾ ಮುಗಿಸಿದ ಅಭ್ಯರ್ಥಿಗಳಿಗೆ 1500 ರೂ. ನೀಡಲಾಗುತ್ತದೆ. ನೋಂದಣಿಗೆ ಹೊಂದಿರಬೇಕಾದ ಅರ್ಹತೆಗಳು: ಕರ್ನಾಟಕದಲ್ಲಿ ವಾಸವಿರುವರು (ಕನಿಷ್ಠ 06 ವರ್ಷಗಳ ವರಗೆ ಪದವಿ/ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮದವರೆಗೆ ಅಧ್ಯಾಯನ ಮಾಡಿದವರು). ತೇರ್ಗಡೆ ಹೊಂದಿರುವ 180 ದಿನಗಳ ನಂತರವೂ ಉದ್ಯೋಗ ದೊರಕದೆ, ಉನ್ನತ ವ್ಯಾಸಂಗಕ್ಕೆ ದಾಖಲಾಗದೆ ಇರುವ ಅಭ್ಯರ್ಥಿಗಳು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಸ್ವಯಂ ಉದ್ಯೋಗ ಹೊಂದಿಲ್ಲದ ಅಭ್ಯರ್ಥಿಗಳು, ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವ ಅಭ್ಯರ್ಥಿಗಳು. 2023–24 ರಿಂದ ಪಾಸಾದ (ತೇ–ರ್ಗಡೆಯಾದ) ಅಭ್ಯರ್ಥಿಗಳು ಯುವನಿಧಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡು ಇದರ ಉಪಯೋಗ ಪಡೆದುಕೊಳ್ಳಬೇಕು. ಅಭ್ಯರ್ಥಿಗಳು ನೋಂದಣಿಯನ್ನು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬಾಪೂಜಿ ಕೇಂದ್ರಗಳಲ್ಲಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ಪಿಎಂಎವಾಯ್ (ಜೆ) ಅಡಿ ಜಿಲ್ಲೆಗೆ ಹದಿನೈದು ಸಾವಿರ ಮನೆ ಮಂಜೂರು:ಸಂಸದ ಸಾಗರ ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ ಬೀದರ: ಜ.06: ಜಿಲ್ಲೆಯನ್ನು ಗುಡಿಸಲು ಮುಕ್ತ ಮಾಡುವ ಉದ್ದೇಶದಿಂದ ಜಿಲ್ಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಹಭಾಗೀತ್ವದಲ್ಲಿ 15 ಸಾವಿರ ಮನೆಗಳು ಮಂಜೂರಾಗಿದ್ದು, ಯಾರಿಗೆ ಮನೆ ಮತ್ತು ನಿವೇಶನವಿಲ್ಲ ಅಂತಹವರಿಗೆ ಮನೆಗಳನ್ನು ಮಂಜೂರು ಮಾಡಲಾಗುವುದು ಎಂದು ಬೀದರ ಸಂಸದರಾದ ಸಾಗರ ಈಶ್ವರ ಖಂಡ್ರೆ ತಿಳಿಸಿದರು.

ಇಂದು ಸೋಮವಾರ ಭಾಲ್ಕಿಯ ಸಂಸದರ ಕಚೇರಿ ಆವರಣದಲ್ಲಿ ಭಾಲ್ಕಿ ತಾಲ್ಲೂಕಿನ ಗ್ರಾಮೀಣ ಭಾಗದ 665 ಜನರಿಗೆ 2024–25ನೇ ಸಾಲಿನ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಿಂದ ಪಿ.ಎಂ.ಎ.ವಾಯ್ (ಜಿ) ಅಡಿಯಲ್ಲಿ ಮಂಜೂರಿಯಾದ ಫಲಾನುಭವಿಗಳಿಗೆ ಮನೆ ಮಂಜೂರಾತಿಯ ತಿಳುವಳಿಕೆ ಪತ್ರ ವಿತರಣೆ ಮಾಡಿ ಮಾತನಾಡಿದರು.

ಸಾಮಾನ್ಯ ಜನರಿಗೆ ಮೊದಲನೆ ಕಂತಿನಲ್ಲಿ 30 ಸಾವಿರ ರೂ, ಎರಡನೇ ಕಂತಿನದಲ್ಲಿ 60 ಸಾವಿರ ರೂ, ಮೂರನೇ ಕಂತಿನಲ್ಲಿ 30 ಸಾವಿರ ರೂ. ಒಟ್ಟು 1,20,000 ರೂ. ಹಣ ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಲಾಗುವುದು. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೊದಲನೇ ಕಂತಿನಲ್ಲಿ 43,750 ರೂ., ಎರಡನೇ ಕಂತಿನಲ್ಲಿ 87,500 ರೂ., ಮೂರನೇ ಕಂತಿನಲ್ಲಿ 43,750 ರೂ. ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು. ಮಧ್ಯವರ್ತಿಗಳ ನಂಬಬೇಡಿ, ಅನುದಾನವು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಆಗಲಿದೆ. ಮೊದಲ ಕಂತು ಜಮೆಯಾದ ತಕ್ಷಣವೇ ಮನೆ ಕಾಮಗಾರಿ ಆರಂಭಿಸತಕ್ಕದ್ದು ಎಂದರು.ಭಾಲ್ಕಿ ತಾಲ್ಲೂಕಿನ ಗ್ರಾಮಾಂತರ ವ್ಯಾಪ್ತಿಗೆ ಒಟ್ಟು 3 ಸಾವಿರ ಮನೆ ಮಂಜೂರಾಗಿದ್ದು, ಈ ಪೈಕಿ ಮೊದಲ ಹಂತದ 665 ಫಲಾನುಭವಿಗಳಿಗೆ ಇಂದು ತಿಳುವಳಿಕೆ ಪತ್ರ ನೀಡಲಾಗುತ್ತಿದೆ ಎಂದರು. ಅದೇ ರೀತಿ ಗ್ರಾಮೀಣ ಭಾಗದಲ್ಲಿ ಇನ್ನೂ ವಸತಿ ರಹಿತರ ಗುರುತಿಸುವಿಕೆ ಕಾರ್ಯ ನಡೆಯುತ್ತಿದ್ದು, ಅಂತವರಿಗೆ ಮುಂದಿನ ಸಮಯದಲ್ಲಿ ಮನೆಗಳನ್ನು ಮಂಜೂರು ಮಾಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತಿವಾರು ಫಲಾನುಭವಿಗಳಿಗೆ ತಿಳುವಳಿಕೆ ಪ್ರಮಾಣ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಸೇರಿದಂತೆ ಫಲಾನುಭವಿಗಳು ಉಪಸ್ಥಿತರಿದ್ದರು.

# ಯಶಸ್ವಿ ಜಾದೂ ಪ್ರದರ್ಶನ ಕುದ್ರೋಳಿ ಗಣೇಶ್ ಗೆ ಅಭಿನಂದನೆ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಜ.6:ಭಾರತೀಯ ಸಂಸ್ಕೃತಿ ಉತ್ಸವ ಜನವರಿ 29ರಿಂದ ಫೆಬ್ರವರಿ ಆರರ ವರೆಗೆ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಬೀರನಹಳ್ಳಿಯಲ್ಲಿ ನಡೆಯುವ ಪ್ರಯುಕ್ತ ಅಂತರಾಷ್ಟ್ರೀಯ ಜಾದೂಗಾರ ಕುದ್ರೋಳಿ ಗಣೇಶ್ ಬೀದರ್ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಕೈಗೊಂಡ "ಜಾಗೃತಿ ಜಾದೂ ಅಭಿಯಾನ" ಯಶಸ್ವಿಯಾಗಿ ಮುಕ್ತಾಯಗೊಂಡ ಸಂದರ್ಭದಲ್ಲಿ ಕಲ್ಬುರ್ಗಿಯ ಅನಂತ ರೆಸಿಡೆನ್ಸಿ ಸಭಾಂಗಣದಲ್ಲಿ ಜ. 6 ರಂದು ಆತ್ಮೀಯವಾಗಿ ಅಭಿನಂದನೆ ಸಲ್ಲಿಸಲಾಯಿತು.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಜಾಗೃತಿ ಜಾದೂ ನಡೆಯಲಿದ್ದು ಬೀದರ್ ಜಿಲ್ಲೆಯ ಬಸವಕಲ್ಯಾಣ ಭಾಲ್ಕಿ ಮತ್ತು ಬೀದರ್ ನಗರದಲ್ಲಿ ಜಾಗೃತಿ ಜಾದೂ ಪ್ರದರ್ಶನ ನೀಡಿದರು. ಬಳಿಕ ಕಲಬುರಗಿಯಲ್ಲಿ ಜನವರಿ 5 ಮತ್ತು 6 ರಂದು ಸರ್ವಜ್ಞ ಕಾಲೇಜು, ಶ್ರೀ ಶರಣ ಬಸವೇಶ್ವರ ವಸತಿ ಶಾಲೆ, ಆರಾಧನಾ ಶಾಲೆ, ಎಸ್ ಆರ್. ಎನ್ ಮೆಹ್ತಾ ಶಾಲೆ ಹಾಗೂ ಮಿಲೇನಿಯಮ್ ಶಾಲೆಗಳಲ್ಲಿ ಯಶಸ್ವಿ ಪ್ರದರ್ಶನ ನೀಡಿದ ಕುದ್ರೋಳಿ ಗಣೇಶ್ ತಂಡವನ್ನು ಭಾರತೀಯ ಸಂಸ್ಕೃತಿ ಉತ್ಸವದ ಸಂಘಟನಾ ಸದಸ್ಯ ಮಾಜಿ ಕಾರ್ಪೊರೇಟರ್ ಉಮೇಶ್ ಶೆಟ್ಟಿ, ಉತ್ಸವದ ಮಾಧ್ಯಮ ಸಂಚಾಲಕರಾದ ಡಾ. ಸದಾನಂದ ಪೆರ್ಲ, ರಾಜ್ಯ ಸರಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷರಾದ ಬಿ. ಎಸ್ ದೇಸಾಯಿ, ಆಶ್ರಯ ಗ್ರೂಪ್ ಆಫ್ ಹೋಟೆಲ್ ನ ಉದ್ಯಮಿಗಳಾದ ವೆಂಕಟೇಶ್ ಎಂ. ಕಡೇಚೂರ್, ಪ್ರವೀಣ್ ಜತ್ತನ್ ಶಾಲು ಹಾರ ಮತ್ತು ಕೃತಿಯನ್ನು ನೀಡಿ ಸನ್ಮಾನಿಸಿದರು.

ಜಾದೂ ತಂಡದ ಕುದ್ರೋಳಿ ಗಣೇಶ್, ಪ್ರವೀಣ್ ಬಜಾಲ್ ಹಾಗೂ ರೇಖಾ ಸುಳ್ಯ ಇವರನ್ನು ಸನ್ಮಾನಿಸಲಾಯಿತು.

ಕಲ್ಯಾಣ ಕರ್ನಾಟಕದ ಜನತೆಯ ಪ್ರೀತಿಗೆ ತಲೆಬಾಗಿದ್ದೇನೆ:ಕುದ್ರೋಳಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 20ಕ್ಕೂ ಹೆಚ್ಚು ಪ್ರದರ್ಶನಗಳನ್ನು ಭಾರತೀಯ ಸಂಸ್ಕೃತಿ ಉತ್ಸವದ ಪ್ರಧಾನ ಸಂಯೋಜಕರಾದ ಬಸವರಾಜ ಪಾಟೀಲ್ ಸೇಡಂ ಅವರು ಆಯೋಜಿಸಿದ್ದು ಶರಣರ ನೆಲ ಬೀದರ್ ಜಿಲ್ಲೆಯಿಂದ ಜಾಗೃತಿ ಜಾದೂ ಪ್ರದರ್ಶನ ಪ್ರಾರಂಭಿಸಿದಾಗ ಸಾವಿರಾರು ಸಂಖ್ಯೆಯಲ್ಲಿ ಜನರು ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಕಲ್ಯಾಣ ಕರ್ನಾಟಕದ ಜನತೆಗೆ ನಾನು ತಲೆಬಾಗಿದ್ದೇನೆ ಎಂದು ಕುದ್ರೋಳಿ ಗಣೇಶ್ ಸಂತಸ ವ್ಯಕ್ತಪಡಿಸಿದರು.

## ಕಿಮ್ಸ್ ಮೆಡಿಕಲ್ ಕಾಲೇಜು ಸರಿಯಾಗಿ ನಡೆಯಬೇಕಾದರೆ ವಿವಿಧ ಸಮಿತಿಗಳ ಪಾತ್ರ ಮುಖ್ಯವಾಗಿದೆ - ಸಚಿವ ಶಿವರಾಜ ತಂಗಡಗಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಸರಿಯಾಗಿ ನಡೆಯಬೇಕಾದರೆ ಇದರ ನಿರ್ವಹಣೆಯ ವಿವಿಧ ಸಮಿತಿಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಹೇಳಿದರು.

ಅವರು ಸೋಮವಾರ ಕೊಪ್ಪಳ ಕಿಮ್ಸ್ ನಿರ್ದೇಶಕರ ಕಛೇರಿಯಲ್ಲಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲೆಯ ಜನತೆಗೆ ಉತ್ತಮವಾದ ಆರೋಗ್ಯ ಸೌಕರ್ಯ ದೊರೆಯಬೇಕು. ಕಿಮ್ಸ್ ವೈದ್ಯರು ಜಿಲ್ಲಾ ಆಸ್ಪತ್ರೆಯ ಮೇಲುಸ್ತುವಾರಿ ವಹಿಸಿಕೊಳ್ಳಬೇಕು. ಜಿಲ್ಲಾ ಆಸ್ಪತ್ರೆಯ ಮುಖ್ಯಸ್ಥರಾಗಲು ಹಿಂಜರಿಯಬಾರದು. ಇದಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿದ್ದರೆ, ನಮ್ಮ ಗಮನಕ್ಕೆ ತರಬೇಕು. ಜಿಲ್ಲಾ ಆಸ್ಪತ್ರೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಹಿಂದೇಟು ಹಾಕುತ್ತಿರುವ ಕಿಮ್ಸ್ ಹಿರಿಯ ವೈದ್ಯರ ಪಟ್ಟಿ ತಯಾರಿಸಿ, ಪ್ರತಿಯೊಬ್ಬರಿಗೂ ಕನಿಷ್ಠ ಎರಡು ವರ್ಷಗಳಂತೆ ನಿಯೋಜಿಸಲು ಕ್ರಮ ಕೈಗೊಳ್ಳಬೇಕು ಎಂದು ಕಿಮ್ಸ್ ನಿರ್ದೇಶಕರಿಗೆ ಸಚಿವರು ಸೂಚನೆ ನೀಡಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಸರಿಯಾದ ಚಿಕಿತ್ಸೆ ಸಿಗಬೇಕು. ವೈದ್ಯರು ತುರ್ತು ಸೇವೆಗೆ ಸದಾ ಸಿದ್ಧರಾಗಿರಬೇಕು. ತಾವು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು. ಚಿಕಿತ್ಸೆ ಲಭ್ಯವಿಲ್ಲ ಎಂದು ರೋಗಿಗಳನ್ನು ಬೇರೆಡೆ ಕಳುಹಿಸುವಂತಾಗಬಾರದು. ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಬೋಧನಾ ವ್ಯವಸ್ಥೆ ಕಲ್ಪಿಸಬೇಕು. ಖಾಲಿ ಇರುವ ಬೋಧಕರ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಳ್ಳಬೇಕು. ಕಿಮ್ಸ್ ಹಾಗೂ ಜಿಲ್ಲಾ ಆಸ್ಪತ್ರೆಯ ಎಲ್ಲಾ ವೈದ್ಯರು, ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಅಂದಾಗ ಮಾತ್ರ ಜನರಿಗೆ ಒಳ್ಳೆಯ ಸೇವೆ ನೀಡಬಹುದು. ಕಿಮ್ಸ್ ಸಂಸ್ಥೆಯಲ್ಲಿ ಈಗಾಗಲೇ ರಚನೆಯಾಗಿರುವ ಎಲ್ಲಾ ಸಮಿತಿಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು. ತಮ್ಮ ಯಾವುದೇ ಸಮಸ್ಯೆಗಳಿದ್ದರೆ, ನಮ್ಮ ಗಮನಕ್ಕೆ ತರಬೇಕು ಎಂದರು.

ಎಸ್ಸಿಪಿ ಟಿಎಸ್ಪಿ ಅನುದಾನವನ್ನು ಸಮರ್ಪಕವಾಗಿ ಬಳಕೆಯಾಗಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಬ್, ಪ್ರಿಂಟರ್, ಟ್ಯಾಬ್ ಹಾಗೂ ಅವರ ಕಲಿಕೆಗೆ ಅನುಕೂಲವಾಗಲು ಬೇಕಾಗುವ ಇತರೆ ವಸ್ತುಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು ಎಂದು ಹೇಳಿದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್ ಅವರು ಮಾತನಾಡಿ, ಜಿಲ್ಲಾ ಆಸ್ಪತ್ರೆ ಮತ್ತು ಕಿಮ್ಸ್‌ನಂತಹ ದೊಡ್ಡ ಸಂಸ್ಥೆಗಳು ನಮ್ಮ ಜಿಲ್ಲೆಯಲ್ಲಿದ್ದು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಸಿಗಬೇಕು. ವೈದ್ಯರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಸಿಗಬೇಕು. ಆಯುಷ್ಮಾನ್ ಭಾರತ್ ಮತ್ತು ಆರೋಗ್ಯ ಕರ್ನಾಟಕ ಕಾರ್ಡ್ಗಳು ಅರ್ಹ ಫಲಾನುಭವಿಗಳಿಗೆ ಸರಿಯಾದ ಸಮಯದಲ್ಲಿ ಸಿಗುವಂತಾಗಬೇಕು ಎಂದರು.

ಈ ಸಭೆಯಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮಜದ್ ಪಟೇಲ್, ಜಿಲ್ಲಾಧಿಕಾರಿ ನಲಿನ್ ಅತುಲ್, ಕಿಮ್ಸ್ ನಿರ್ದೇಶಕರ ಡಾ.ವಿಜಯನಾಥ ಇಟಗಿ, ಕಿಮ್ಸ್ ಮುಖ್ಯ ಆಡಳಿತಾಧಿಕಾರಿ ಬಿ.ಕಲ್ಲೇಶ್, ನಾಮನಿರ್ದೇಶಿತ ಸದಸ್ಯರಾದ ಸಲೀಂ ಅಳವಂಡಿ, ಕಿಮ್ಸ್ ಅಧಿಕಾರೇತರ ಸದಸ್ಯರಾದ ವಿಜಯಲಕ್ಷ್ಮಿ ಸೇರಿದಂತೆ ಕಿಮ್ಸ್ನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಅಧ್ಯಾತ್ಮದಿಂದ ಸಾಧ್ಯ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಅಧ್ಯಾತ್ಮದಿಂದ ಸಾಧ್ಯ ಎಂದು ದಾರವಾಡದ ಮುರಘಾ ಮಠದ ಪೂಜ್ಯಶ್ರೀ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು. ತಾಲ್ಲೂಕಿನ ಹಾರಕೂಡ ಗ್ರಾಮದಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಆಯೋಜಿಸಿದ್ದ ಶಿವಾನುಭವ ಚಿಂತನ ಗೋಷ್ಠಿಯಲ್ಲಿ ಸಾನಿಧ್ಯ ವಹಿಸಿ ಮಾತನಾಡಿ ಸಂಸಾರಿಕ ಬದುಕಿನಲ್ಲಿ ಅಧ್ಯಾತ್ಮ ಎನ್ನುವ ಚಿಲಕಗಳು ಬೇಕೆ ಬೇಕು ಎಂದು ಮನುಷ್ಯನ ಬದುಕು ಎತ್ತಿನ ಬಂಡಿಯಂತೆ ಎಂಬ ದೃಷ್ಟಾಂತ ನೀಡಿದರು. ಹಾರಕೂಡದ ಪೂಜ್ಯರು ಗುರು ವಿರಕ್ತರನ್ನು ಸಮಾನವಾಗಿ ಕಂಡವರಾಗಿದ್ದಾರೆ ಎಂದು ತಿಳಿಸಿದರು. ಬೈಲೂರಿನ ನಿಜಗುಣ ಪ್ರಭು ತೋಂಟದಾರ್ಯ ಮಹಾಸ್ವಾಮಿಗಳು ಮಾತನಾಡಿ ಯುವಕರು ಕೃಷಿ ಕ್ಷೇತ್ರಕ್ಕೆ ಮಹತ್ವ ನೀಡದೆ ಕೇವಲ ಉನ್ನತ ಹುದ್ದೆಗಳ ಕಡೆಗೆ ವಾಲುತ್ತಿದಾರೆ ಮುಂದಿನ ನಾಲ್ಕೈದು ದಶಕಗಳಲ್ಲಿ ಆಹಾರದ ಕೊರತೆ ಕಾಣುವುದು ಖಚಿತ ಎಂದರು. ಬೀದರ ಲೋಕಸಭಾ ಸದಸ್ಯರಾದ ಸಾಗರ ಖಂಡ್ರೆ ಉದ್ಘಾಟಿಸಿ ಮಾತನಾಡಿ ಪೂಜ್ಯರ ಮಾರ್ಗದರ್ಶನ ನಮಗೆಲ್ಲರಿಗೂ ಅವಶ್ಯಕವಾಗಿದೆ ಪೂಜ್ಯರು ಸದಾ ಹಸನ್ಮುಖಿ ಯಾಗಿದು ಅನೇಕ ರಚನಾತ್ಮಕ ಕಾರ್ಯಗಳು ಮಾಡುತ್ತಿದ್ದಾರೆ ಎಂದು ತಿಳಿಸಿದರು. ಶಾಸಕರಾದ ಶರಣು ಸಲಗರ್ ಮಾತನಾಡಿ ಯುವಕರು ಮೊಬೈಲ್ ಚಟಕೆ ಬಿಳಬೇಡಿ ಅಲ್ಲದೆ ಮಧ್ಯೆಪಾನ ಸೇವಿಸಬೇಡಿ ಎಂದು ಕರೆನೀಡಿದರು. ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಮಾತನಾಡಿ ಲಿಂ. ಶ್ರೀ ಚನ್ನಬಸವ ಶಿವಯೋಗಿಗಳು ಗುರು ವಿರಕ್ತರನ್ನು ಸಮಾನರಾಗಿ ಕಂಡಿದ್ದಾರೆ ಎಂದು ಅವರ ಜೀವನದಲ್ಲಿ ನಡೆದ ಘಟನೆಗಳ ಬಗ್ಗೆ ತಿಳಿಸಿದರು. ಈ ಸಂದರ್ಭದಲ್ಲಿ ಶಾಹಬಾದಿನ ಶ್ರೀ ರಾಜ ಶಿವಯೋಗಿ ಸ್ವಾಮೀಜಿ. ಹುಮನಾಬಾದ ಶಾಸಕರಾದ ಡಾ. ಸಿದ್ದಲಿಂಗಪ ಪಾಟೀಲ. ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ್. ಜಗದೇವಗುತ್ತೇದಾರ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ ನಾರಾಯಣರಾವ. ನಿವೃತ್ತ ನ್ಯಾಯಾಧೀಶ ಸುಭಾಷ ನಾಗರಾಳೆ. ಪ್ರಮುಖರಾದ ಧನರಾಜ ತಾಡಂಪಳ್ಳಿ. ಜಗನ್ನಾಥ ಪಾಟೀಲ. ಅರ್ಜುನ ಕನಕ. ಶಿವರಾಜ ನರಶೆಟೆ. ಶಶಿಕಾಂತ ದುರ್ಗೆ. ಶಿವರಾಜ ಪಾಟೀಲ. ಜಗದೀಶ್ ಚಿರಡೆ. ಸಂತೋಷ ಪಾಟೀಲ. ಮಲ್ಲಿನಾಥ ಹಿರೇಮಠ. ನಿಲಕಂಠ ರಾಠೊಡ. ಡಿ. ಕೆ. ದಾವುದ. ಶರಣು ಅಲಗೂಡ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸ್ವಾಗತ ರಾಜಕುಮಾರ ಸಿರಗಾಪುರ. ನವಲಿಂಗ ಪಾಟೀಲ ನಿರೂಪಿಸಿದರು. ಸಿದ್ರಾಮಯ್ಯ ಸ್ವಾಮಿ ಗೋರ್ಟಾ ಸಂಗೀತ ಸೇವೆ ಸಲ್ಲಿಸಿದರು. ರಾಜಕುಮಾರ ಹೂಗಾರ. ಜನಾರ್ದನ ವಾಘಮಾರೆ ಸಾಥ ನೀಡಿದರು. .

## ಜನವರಿ 12 ರಿಂದ 18 ರವರೆಗೆ ಗವಿಶ್ರೀ ಕ್ರೀಡಾ ಉತ್ಸವ: ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ದಕ್ಷಿಣ ಭಾರತದ ಕುಂಭಮೇಳವೆಂದು ಪ್ರಸಿದ್ದಿಯಾದ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ 2025ರ ಗವಿಶ್ರೀ ಕ್ರೀಡಾ ಉತ್ಸವವು ಜನವರಿ 12 ರಿಂದ 18 ರವರೆಗೆ ಕೊಪ್ಪಳ ನಗರದಲ್ಲಿ ನಡೆಯಲಿದೆ ಎಂದು ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಭಾನುವಾರ ಗವಿಶ್ರೀ ಕ್ರೀಡಾ ಉತ್ಸವ–2025 ಕುರಿತು ಮಾಹಿತಿ ನೀಡಲು ಕೊಪ್ಪಳ ನಗರದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೊಪ್ಪಳ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಸಹಭಾಗಿತ್ವದಲ್ಲಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಗವಿಶ್ರೀ ಕ್ರೀಡಾ ಉತ್ಸವ–2025ರ ಕ್ರೀಡಾಕೂಟದಲ್ಲಿ 19 ರೀತಿಯ ವಿವಿಧ ಸಾಂಪ್ರದಾಯಿಕ ಹಾಗೂ ದೇಶಿಯ ಕ್ರೀಡೆಗಳು ಮತ್ತು ಪ್ರದರ್ಶನ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಉಪಹಾರ, ಊಟದ ವ್ಯವಸ್ಥೆ ಮಾಡಿಸಲಾಗಿದೆ ಎಂದರು.

ಆಹ್ವಾನಿತ ತಂಡಗಳಿಂದ ಕ್ರಿ–ಕೆಟ್ ಪಂದ್ಯಾವಳಿಯು ನಗರದ ತಾಲ್ಲೂಕ ಕ್ರೀಡಾಂಗಣದಲ್ಲಿ ಜ. 12 ಮತ್ತು 13 ರಂದು ಬೆಳಿಗ್ಗೆ 11 ಗಂಟೆಗೆ ಹಾಗೂ ಫೈನಲ್ ಪಂದ್ಯಾವಳಿ ಜ. 14 ರಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದ್ದು, ವಿಜೇತರಿಗೆ ಆರ್ಕಷಕ ಟ್ರೋಫಿ ನೀಡಲಾಗುವುದು. ಜ.14ರಂದು ಬೆಳಿಗ್ಗೆ 6.30ಕ್ಕೆ ಕೊಪ್ಪಳ ನಗರದ ಕಿತ್ತೂರು ಚೆನ್ನಮ್ಮ ಸರ್ಕಲ್, ಅಶೋಕ ಸರ್ಕಲ್, ಕಿನ್ನಾಳ ರೋಡ್, ಭಾಗ್ಯನಗರ ಕ್ರಾಸ್, ಭಾಗ್ಯನಗರ, ಲೇಬರ್ ಸರ್ಕಲ್, ಸಿಂಪಿ ಲಿಂಗಣ್ಣ ರಸ್ತೆ ಮೂಲಕ ಗಡಿಯಾರ ಕಂಬ ಮಾರ್ಗವಾಗಿ ಗವಿಮಠ ಆವರಣದವರೆಗೆ ಪುರುಷ ಮತ್ತು ಮಹಿಳೆಯರಿಗೆ 12 ಕಿ.ಮಿ. ಮ್ಯಾರಥಾನ್ ಓಟ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 20,000 ರೂ., ದ್ವಿತೀಯ 15,000 ರೂ., ತೃತೀಯ 12,000 ರೂಪಾಯಿ ಹಾಗೂ ಒಟ್ಟು ಎಂಟು ಹಂತಗಳಲ್ಲಿ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ಹೇಳಿದರು.

ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ಜ. 14 ರಂದು ಬೆಳಿಗ್ಗೆ 11 ಗಂಟೆಗೆ ಗವಿಮಠದ ರಥದ ಹತ್ತಿರ ಏರ್ಪಡಿಸಲಾಗಿದ್ದು, ಪ್ರಥಮ 10,000 ರೂ., ದ್ವಿತೀಯ ದ್ವಿತೀಯ 8000 ರೂ., ತೃತೀಯ 6000 ರೂ., ನಾಲ್ಕನೇ ಬಹುಮಾನ 4,000 ರೂಪಾಯಿ ಹಾಗೂ ಭಾಗವಹಿಸಿದವರೆಲ್ಲರಿಗೂ ಉಡುಗೊರೆ ನೀಡಲಾಗುತ್ತದೆ. ಜ. 15 ರಂದು ಬೆಳಿಗ್ಗೆ 10 ಗಂಟೆಗೆ ಗವಿಮಠ ಆವರಣದಲ್ಲಿ ಆಕರ್ಷಕ ಮಲ್ಲಕಂಬ ಪ್ರದರ್ಶನ ಜರುಗಲಿದ್ದು, ಹೊಳೆಆಲೂರಿನ ಜ್ಞಾನ ಸಿಂಧು ಅಂಧ ಮಕ್ಕಳ ಶಾಲೆ, ಸಿರಗುಪ್ಪದ ಯೋಗ ಮಲ್ಲಕಂಬ ತಂಡ ಮತ್ತು ಕೊಪ್ಪಳದ ಮಹಿಳಾ ಮಲ್ಲಕಂಬ ತಂಡ ಪಾಲ್ಗೊಳ್ಳಲಿದ್ದಾರೆ ಎಂದರು.

ಜ. 15 ರಂದು ಬೆಳಿಗ್ಗೆ 11 ಗಂಟೆಗೆ ಗವಿಮಠ ಆವರಣದಲ್ಲಿ ನಡೆಯಲಿರುವ ಯುವಕರ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯು ಮುಕ್ತ ಆಹ್ವಾನವಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6000 ರೂ. ಗಳ ಬಹುಮಾನವಿದೆ. ಅಂ–ದು ಬೆಳಿಗ್ಗೆ 9.30ಕ್ಕೆ ಗವಿಮಠ ಆವರಣದಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಶ್ವಾನ ಪ್ರದರ್ಶನವಿರುತ್ತದೆ. ಜ. 16ರಂದು ಬೆಳಿಗ್ಗೆ 10 ಗಂಟೆಗೆ ಕರಾಟೆ ಪ್ರದರ್ಶನವಿದೆ. ಬೆಳಿಗ್ಗೆ 10 ಗಂಟೆಗೆ ಯುವಕರಿಂದ ಎತ್ತಿನ ಬಂಡಿ ಜಗ್ಗುವ ಸ್ಪರ್ಧೆ ಜರುಗಲಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6000 ರೂ. ಬಹುಮಾನವಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಆಹ್ವಾನಿತ ರಾಷ್ಟ್ರ ಹಾಗೂ ರಾಜ್ಯ ಮಟ್ಟದ, ಪುರುಷ ಮತ್ತು ಮಹಿಳಾ ಕುಸ್ತಿ ಪಟುಗಳಿಂದ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಕೊಪ್ಪಳ ಕೇಸರಿಗೆ ಬೆಳ್ಳಿ ಗಧೆ ನೀಡಲಾಗುವುದು. ತಾಲ್ಲೂಕ ಕ್ರೀಡಾಂಗಣದಲ್ಲಿ ಸಂಜೆ 4 ಗಂಟೆಗೆ ನಡೆಯುವ ಪುರುಷ ವಿಕಲಚೇತನರ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ 15,000 ರೂ., ದ್ವಿತೀಯ 13,000 ರೂ., ತೃತೀಯ 10,000 ರೂ.ಗಳ ಬಹುಮಾನವಿರುತ್ತದೆ. ಅಂದು ಬೆಳಿಗ್ಗೆ 10 ಗಂಟೆಗೆ ತಾಲ್ಲೂಕ ಕ್ರೀಡಾಂಗಣದಲ್ಲಿ ಮಹಿಳೆಯರಿಗೆ ಥ್ರೋಬಾಲ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು, ಪ್ರಥಮ 20,000 ರೂ., ದ್ವಿತೀಯ 18,000 ರೂ., ತೃತೀಯ 15,000 ರೂ. ಮತ್ತು ನಾಲ್ಕನೇ ಸ್ಥಾನಕ್ಕೆ 12,000 ರೂ.ಗಳ ಬಹುಮಾನವಿದೆ. ಅಂ–ದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪುರುಷರ ಡಬಲ್ಸ್ ಶೆಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ 15,000 ರೂ., ದ್ವಿತೀಯ 12,000 ರೂ., ತೃತೀಯ 10,000 ರೂ., ನಾಲ್ಕನೇ ಸ್ಥಾನಕ್ಕೆ 5,000 ರೂ. ಗಳ ಬಹುಮಾನ ಸಿಗಲಿದೆ. ಅಂ–ದು ಮಧ್ಯಾಹ್ನ 3 ಗಂಟೆಗೆ ತಾಲ್ಲೂಕ ಕ್ರೀಡಾಂಗಣದಲ್ಲಿ 15 ವರ್ಷದ ಒಳಗಿನ ಮಕ್ಕಳಿಗಾಗಿ ಹಮ್ಮಿಕೊಂಡ ಛದ್ಮವೇಷ/ಫ್ಯಾಷನ್ ಷೋನಲ್ಲಿ ಪ್ರಥಮ 15,000 ರೂ., ದ್ವಿತೀಯ 12,000 ರೂ., ತೃತೀಯ 10,000 ರೂ. ಬಹುಮಾನವಿದ್ದು, ಭಾಗವಹಿಸಿದವರೆಲ್ಲರಿಗೂ ಆಕರ್ಷಕ ಬಹುಮಾನ ನೀಡಲಾಗುವುದು. ಅಂದು ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಹಗ್ಗ ಜಗ್ಗಾಟ ಸ್ಪರ್ಧೆ ಏರ್ಪಡಿಸಲಾಗಿದ್ದು, ಪ್ರಥಮ 10,000 ರೂ., ದ್ವಿತೀಯ 8000 ರೂ., ತೃತೀಯ 6,000 ರೂ.ಗಳ ಬಹುಮಾನ ನೀಡಲಾಗುವುದು ಎಂದು ತಿಳಿಸಿದರು. ಜ. 17ರಂದು ಸಂಜೆ 5 ಗಂಟೆಯಿಂದ ತಾಲ್ಲೂಕ ಕ್ರೀಡಾಂಗಣದಲ್ಲಿ ಆಹ್ವಾನಿತ ಪುರುಷರ ದೇಹದಾರ್ಢ್ಯತೆ (Body Building) ಸ್ಪರ್ಧೆಯಲ್ಲಿ ನೂರಕ್ಕೂ ಅಧಿಕ ಸ್ಪರ್ಧಿಗಳು, ಮೊದಲ ಮೂವತ್ತು ವಿಜೇತರಿಗೆ ಬಹುಮಾನ ನೀಡಲಾಗುವುದು. ಒಡಿ. ಏರಿ–ರಿಚಿಟ ಪ್ರಶಸ್ತಿಯನ್ನು ಸಹ ಪ್ರದಾನ ಮಾಡಲಾಗುತ್ತದೆ. ಅಂದು ಬೆಳಿಗ್ಗೆ 10 ಗಂಟೆಗೆ ಪುರುಷ ಹಾಗೂ ಮಹಿಳೆಯರ ಮುಕ್ತ ವಾಲಿಬಾಲ್ ಪಂದ್ಯಾವಳಿಗಳು ನಡೆಯಲಿದ್ದು, ಫೈನಲ್ ಪಂದ್ಯಾವಳಿ ಜ. 18ರ ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಜರುಗಲಿದೆ. ಇದರಲ್ಲಿ ವಿಜೇತರಾದವರಿಗೆ ಪ್ರಥಮ 30,000 ರೂ., ದ್ವಿತೀಯ 25,000 ರೂ, ತೃತೀಯ 20,000 ರೂ., ಚತುರ್ಥ 15,000 ರೂ. ಮತ್ತು ಆಕರ್ಷಕ ಟ್ರೋಫಿ ಸಿಗಲಿದೆ. ಜ. 17ರ ಬೆಳಿಗ್ಗೆ 10 ಗಂಟೆಗೆ ಪುರುಷ ಹಾಗೂ ಮಹಿಳೆಯರಿಗೆ ಮುಕ್ತ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಂಡಿದ್ದು, ಫೈನಲ್ ಪಂದ್ಯಾವಳಿ ಜ. 18ರ ಮಧ್ಯಾಹ್ನ 3 ಗಂಟೆಗೆ ಗವಿಮಠ ಆವರಣದಲ್ಲಿ ಜರುಗಲಿದೆ. ಇದರಲ್ಲಿ ಪ್ರಥಮ ಬಹುಮಾನ ರೂಪಾಯಿ 30,000 ರೂ., ದ್ವಿತೀಯ 25,000 ರೂ., ತೃತೀಯ – 20,000 ರೂ., ಚತುರ್ಥ 15,000 ರೂ. ಮತ್ತು ಆಕರ್ಷಕ ಟ್ರೋಫಿ ದೊರೆಯಲಿದೆ. ಜ. 17ರ ಬೆಳಿಗ್ಗೆ 10 ಗಂಟೆಯಿಂದ 12 ಗಂಟೆವರೆಗೆ ಗವಿಮಠ ಆವರಣದಲ್ಲಿ ಸಾರ್ವಜನಿಕರಿಗೆ ಮುಕ್ತ ಗಾಳಿಪಟ ಹಾರಟ ಸ್ಪರ್ಧೆ ಏರ್ಪಡಿಸಲಾಗಿದ್ದು, ಭಾಗವಹಿಸಿದ ಎಲ್ಲರಿಗೂ ಆಕರ್ಷಕ ಉಡುಗೊರೆ ಸಿಗಲಿದೆ. ಅಲ್ಲದೇ ಅಂದು ಮಧ್ಯಾಹ್ನ 1 ರಿಂದ ಸಂಜೆ 6 ಗಂಟೆಯವರೆಗೆ ದೇಶದ ಪ್ರಸಿದ್ಧ 5 ತಂಡಗಳಿಂದ ಬೃಹತ್ ಗಾತ್ರದ ಗಾಳಿಪಟ ಪ್ರದರ್ಶನ ಮತ್ತು ರಾತ್ರಿ 10 ರಿಂದ 12 ಗಂಟೆವರೆಗೆ ಎಲ್.ಇ.ಡಿ ಗಾಳಿಪಟ ಪ್ರದರ್ಶನ ಜರುಗಲಿದೆ.

ಜನವರಿ 17ರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಿಂದ ಗವಿಮಠದ ವರೆಗೆ ಎತ್ತಿನ ಬಂಡಿ ಶೃಂಗಾರ ಸ್ಪರ್ಧೆ ಹಮ್ಮಿಕೊಂಡಿದ್ದು, ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬೆಳ್ಳಿಯ ಎತ್ತು ಬಂಡಿ, ದ್ವಿತೀಯ ಬೆಳ್ಳಿಯ ಬಂಡಿ, ತೃತೀಯ ಬೆಳ್ಳಿಯ ಎತ್ತು ಬಹುಮಾನದ ರೂಪದಲ್ಲಿ ನೀಡಲಾಗುವುದು. ಸಾಂಪ್ರದಾಯಿಕ, ಜನಪದ ಶೈಲಿಯಲ್ಲಿ ಎತ್ತು ಬಂಡಿಗಳನ್ನ ಬಣ್ಣ ಹಚ್ಚಿ ಶೃಂಗಾರಗೊಳಿಸಿದ ರೈತನು ಕೂಡ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಮಾಜಿ ಸಂಸದರಾದ ಕರಡಿ ಸಂಗಣ್ಣ, ಮುಖಂಡರಾದ ಸಿ.ವಿ. ಚಂದ್ರಶೇಖರ್, ಮಾಜಿ ಜಿ.ಪಂ. ಸದಸ್ಯ ಗೂಳಪ್ಪ ಹಲಗೇರಿ, ಕೊಪ್ಪಳ ನಗರಸಭೆ ಸದಸ್ಯರಾದ ರಾಜಶೇಖರ ಆಡೂರ, ಅಜೀಂ ಅತ್ತರ್, ಅರುಣ್ ಅಪ್ಪು ಶೆಟ್ಟಿ ಸೇರಿದಂತೆ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.


## ಗಾಂಜಾ ಸೇವನೆ: ಇಬ್ಬರ ಬಂಧನ


ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.5–ನಗರದ ಆಳಂದ ಚೆಕ್ ಪೋಸ್ಟ್ ಮತ್ತು ಆಳಂದ ಚೆಕ್ ಪೋಸ್ಟ್ ಹತ್ತಿರದ ಕಲ್ಯಾಣ ಮಂಟಪದ ಬಳಿ ಗಾಂಜಾ ಸೇವನೆ ಮಾಡುತ್ತಿದ್ದ ಇಬ್ಬರನ್ನು ಸಬ್–ಅರ್ಬನ್ ಪೊಲೀಸರು ಬಂಧಿಸಿದ್ದಾರೆ.

ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಅವರ ನಿರ್ದೇಶನದಂತೆ, ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್, ಸಬ್–ಅರ್ಬನ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಡಿ.ಜಿ.ರಾಜಣ್ಣ ಅವರ ಮಾರ್ಗದರ್ಶನದಲ್ಲಿ ಪಿಐ ಸಂತೋಷ ಎಲ್.ತಟ್ಟೆಪಳ್ಳಿ ನೇತೃತ್ವದಲ್ಲಿ ಸಿಬ್ಬಂದಿಗಳಾದ ವಿಠ್ಠಲ, ಶಶಿಕಾಂತ, ಫಿರೋಜ್ ಅವರು ದಾಳಿ ನಡೆಸಿ ಗಾಂಜಾ ಸೇವನೆ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಎನ್.ಡಿ.ಪಿಎಸ್ ಆ್ಯಕ್ಟ್ ಅಡಿಯಲ್ಲಿ ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

## ಗೂಗಲ್ ಪೇ ಬಿಸಿನೆಸ್ ಆಪ್ ನಿಂದ ವಂಚನೆ




(ಎಂ.ಡಿ ಮುಸ್ತಾಫ್)

ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು: ಗೂಗಲ್ ಪೇ ಬಿಸಿನೆಸ್ ಆಪ್ ನಿಂದ ಫ್ರೀ ಎಂದು ಹೇಳಿ ಗೂಗಲ್ ಸೌಂಡ್ ಸ್ಪೀಕರ್ ಕೊಟ್ಟು ಗ್ರಾಹಕರ ಖಾತೆಯಿಂದ 504 ರೂಪಾಯಿ ಗಳ ಪಂಗನಾಮ್ ಹಾಕುತ್ತಿದ್ದಾರೆ ಲಿಂಗಸೂಗೂರ ಪಟ್ಟಣದ ಹಳೆ ತಹಶೀಲ್ದಾರ್ ಕಚೇರಿ ಹತ್ತಿರ ಇರುವ ಆನ ಲೈನ ಕಂಪ್ಯೂಟರ್ ಹಾಗೂ ಜರಾಕ್ಸ್ ಸುಮಾರು 5 ರಿಂದ 6 ಅಂಗಡಿ ಮಾಲೀಕರಿಗೆ ಹಾಗೂ ಪಟ್ಟಣದ ಸಣ್ಣ ಪುಟ್ಟ ಅಂಗಡಿಗಳಿಂದ ಗ್ರಾಹಕರ ಖಾತೆಯಿಂದ ಹಣ ಕಡಿತಗೊಂಡಿದೆ ಸಣ್ಣ ಪುಟ್ಟ ವ್ಯಾಪಾರ ಮಾಡುವರು ಈ ರೀತಿ ವಂಚನೆಗೆ ಬಲಿ ಯಾಗಿದ್ದಾರೆ.

ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕಾಪಾಡುವುದನ್ನು ಮತ್ತು ಪಾವತಿ ವಂಚನೆಗಳಿಂದ ಹಣವನ್ನು ಸುರಕ್ಷಿಸುವುದು ಅತಿ ದೊಡ್ಡ ಸಮಸ್ಯೆಯಾಗಿದೆ. ಬ್ಯಾಂಕ ಡಿಜಟಲಿಕರಣ ದಿಂದ. ಗ್ರಾಹಕರು ಗೂಗಲ್ ಪೇ ಫೋನ್ ಪೇ ಹಾಗೂ ಪೇಟಿಎಮ್ ಆಪ್ ನಿಂದ ವಂಚನೆಗೆ ಒಳಪಟ್ಟಿದ್ದಾರೆ ಕೊಡಲೇ ಸೈಬರ್ ಕ್ರೈಂ ಇಂತಹ ಸುಳ್ಳು ಹೇಳಿ ಮೋಸಮಾಡುತ್ತಿರುವ ಇಂತಹ ಆಪ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಗ್ರಾಹಕರು ತಿಳಿಸಿದ್ದಾರೆ.

## ಹಿಂದೂ ಮುಸ್ಲಿಂ ಭಾವೈಕ್ಯತೆ ಮೆರೆದ ಜಾಮೀದ ಕಮೀಟಿ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು: ತಾಲೂಕಿನ ಯರಡೋಣ ಗ್ರಾಮದಲ್ಲಿ ಹಿಂದೂ ಮುಸ್ಲಿಂ ಭಾಂದವರ ಮಧ್ಯೆ ಗಲಾಟೆ ನಡೆದು, ಅಶಾಂತಿಗೆ ಕಾರಣವಾಗಿತ್ತು, ಆದರೆ ಯರಡೋಣ ಗ್ರಾಮದಲ್ಲಿ ರವಿವಾರ ದಂದು ನಡೆದ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿದ ಭಕ್ತರಿಗೆ ಯರಡೋಣ ಜಾಮೀಯ ಮಜೀದ್ ಕಮೀಟಿ ವತಿಯಿಂದ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ಹೋಗುವ ಭಕ್ತರಿಗೆ ಅನ್ನ ಪ್ರಸಾದ ಕಾರ್ಯಕ್ರಮ ಮಾಡಲಾಯಿತು.

ಶಾಂತಿಯ ಸಂಕೇತವಾಗಿದೆ, ಜತೆಗೆ ಇತರೆ ಯರಡೋಣ ಗ್ರಾಮದ ಮಾದರಿಯಾಗಿದೆ.

ಈ ಸಂದರ್ಭದಲ್ಲಿ ಮಜಾಹರ್ ಖಾಲಿದ್, ಶಿರಾಜ ತೋಟದ ,ನಬಿಸಾಬ ,ಖಾಸಿಂ ಸಾಬ ಸರ್ ನಾಯ್ಕ್, ಹಾಜಿ ಬಾಬು, ಶರೀಫ್ ಸೇರಿದಂತೆ ಉಪಸ್ಥಿತರಿದ್ದರು.

## ಮಾಧ್ಯಮ ಆಕಾಡೆಮಿ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು: ತನ್ನದೇ ಆದ ವಿಶಿಷ್ಟ ಬರಹಗಳ ಮೂಲಕ ಓದುಗರ ಮನಗೆದ್ದ ತಾಲೂಕಿನ ಹಿರಿಯ ಪತ್ರಕರ್ತ ಶರಣಯ್ಯ ಒಡೆಯರ್ ಮುದಗಲ್ ಅವರಿಗೆ ಪ್ರಸಕ್ತ ಸಾಲಿನ ಮಾಧ್ಯಮ ಆಕಾಡೆಮಿ ಪ್ರಶಸ್ತಿ ಲಭಿಸಿದೆ. ಕಳೆದ ಎರಡೂವರೆ ದಶಕಗಳ ಕಾಲ ಪತ್ರಿಕಾ ರಂಗದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಪತ್ರಕರ್ತ ಒಡೆಯರ್ ಮಾಧ್ಯಮ ವೃತ್ತಿಯ ಜೀವಮಾನ ಸಾಧನೆಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಇಂದ ಕೊಡಮಾಡಲ್ಪಡುವ ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ–ಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಗುರುರಾಜ ಗೌಡೂರು, ಮಹಮ್ಮದ್ ಖಾಜಾಹುಸೇನ್, ಅಮರಯ್ಯ ಘಂಟಿ ಸೇರಿ ಸಂಘದ ಸರ್ವ ಪದಾಧಿಕಾರಿಗಳು ಅಭಿನಂದಿಸಿ ಶುಭ ಹಾರೈಸಿದ್ದಾರೆ.

## ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಿರಾಜ್ ಬಿಸರಳ್ಳಿ ಹಾಗೂ ಅಖಿಲ್ ಉಡೇವುರಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳದ ಶಾಸಕ ರಾಘವೇಂದ್ರ ಹಿಟ್ನಾಳ್ ಮತ್ತು ಸಂಸದ ರಾಜಶೇಖರ್ ಹಿಟ್ನಾಳ್, ಮಾಜಿ ಸಂಸದ ಕರಡಿ ಸಂಗಣ್ಣ ನವರು 2023 ನೇ ಸಾಲಿನ ಕರ್ನಾಟಕ ಮಾಧ್ಯಮ ಅಕಾಡಮಿ ಪ್ರಶಸ್ತಿಗೆ ಆಯ್ಕೆಯಾದ ಹಿರಿಯ ಪತ್ರಕರ್ತ ಸಿರಾಜ್ ಬಿಸರಳ್ಳಿ ಹಾಗೂ ಮಾಧ್ಯಮ ಅಕಾಡೆಮಿಯ ದತ್ತಿ ಪ್ರಶಸ್ತಿ ಪುರಸ್ಕೃತ ಯುವ ಪತ್ರಕರ್ತ ಮಹಮ್ಮದ್ ಅಖೀಲ್ ಉಡೇವು ಅವರಿಗೆ ಪ್ರವಾಸಿ ಮಂದಿರದಲ್ಲಿ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಗೂಳಪ್ಪ ಹಲಗೇರಿ, ನಗರಸಭೆ ಸದಸ್ಯರಾದ ರಾಜಶೇಖರ್ ಅಡೂರ್, ಅಜೀಮ್ ಅತ್ತಾರ್, ಅರುಣ್ ಅಪ್ಪು ಶೆಟ್ಟಿ , ಮುಖಂಡರಾದ ಶರಣಪ್ಪ ಸಜ್ಜನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೆ.ಎಸ್.ಆರ್.ಟಿ.ಸಿ ನೌಕರರಿಗೆ ನಗದು ರಹಿತ ಚಿಕಿತ್ಸಾ ವೆಚ್ಚ ಯೋಜನೆ ಜಾರಿ

## 34 ಸಾವಿರ ಕುಟುಂಬಗಳ ಅವಲಂಬಿತರಿಗೆ ಉಪಯೋಗ : ಮುಖ್ಯಮಂತ್ರಿ ಸಿದ್ದರಾಮಯ್ಯ

ಮಲ್ಲಮನುಡಿವಾರ್ತೆ ಬೆಂಗಳೂರು, ಜ.06:ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸುಮಾರು 34 ಸಾವಿರ ನೌಕರರು ಮತ್ತು ಅವಲಂಭಿತರಿಗೆ ಸುಮಾರು 272 ಸರ್ಕಾರಿ / ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸಾ ಯೋಜನೆ ಜಾರಿಗೆ ತಂದಿದ್ದು, ಇದಕ್ಕೆ ಒಟ್ಟು 46 ಕೋಟಿ ವೆಚ್ಚವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಯ್ಯ ತಿಳಿಸಿದರು.

ಇಂದು ವಿಧಾನಸೌಧದಲ್ಲಿ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಮತ್ತು ಸಿಬ್ಬಂದಿಗೆ ನಗದು ರಹಿತ ಆರೋಗ್ಯ ಸವಲತ್ತು ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಸಾರಿಗೆ ನೌಕರರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ನೌಕರರ ಕುಟುಂಬದವರು ನಗದು ರಹಿತ ಚಿಕಿತ್ಸಾ ಯೋಜನೆಗೆ ಅರ್ಹರಾಗಿರುತ್ತಾರೆ. ಅವರು ಎಲ್ಲಿ ನೆಲೆಸಿರುವರೋ ಅಲ್ಲಿಯೇ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ನೌಕರರು ಪ್ರತಿ ತಿಂಗಳು ರೂ 650 ನ್ನು ಈ ಯೋಜನೆಗೆ ಮೀಸಲಿಡಬೇಕು. ಸರ್ಕಾರವು ಪ್ರತಿ ವರ್ಷ 20 ಕೋಟಿ ಧನ ಸಹಾಯ ಮಾಡಲಿದೆ. ಉಳಿದಂತೆ ನೌಕರರ ವಂತಿಕೆಯಿಂದ ಬಂದ ಹಣವನ್ನು ಯೋಜನೆಗೆ ಉಪಯೋಗಿಸಲಾಗುವುದು ಎಂದರು. ಈ ಯೋಜನೆ ನಿಗಮದ ನೌಕರರು ಹಾಗೂ ಕುಟುಂಬದವರಿಗೆ ಬಹಳಷ್ಟು ಅನುಕೂಲವಾಗಲಿದೆ.

ಮುಂಬರುವ ದಿನಗಳಲ್ಲಿ ಬಿ.ಎಂಟಿ.ಸಿ ನೌಕರರಿಗೂ ಈ ಯೋಜನೆಯನ್ನು ವಿಸ್ತರಿಸಲಾಗುವುದು. ಈ ಯೋಜನೆಯಡಿ 272 ಆಸ್ಪತ್ರೆಗಳೊಂದಿಗೆ ಒಡಂಬಡಿಕೆ



ಮಾಡಿಕೊಳ್ಳಲಾಗಿದ್ದು, ಒಡಂಬಡಿಕೆ ಮಾಡಿಕೊಳ್ಳಲಾದ ಆಸ್ಪತ್ರೆಗಳು, ನೌಕರರು ಮತ್ತು ಅವಲಂಬಿತರಿಗೆ ತಾರತಮ್ಯ ತೋರದೇ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಸ್ಪಂದಿಸಬೇಕು ಎಂದರು.

ಲಿಂಗತಾರತಮ್ಯ ಹೋಗಲಾಡಿಸಲು ಹಾಗೂ ಮಹಿಳೆಯರಲ್ಲಿ ಶಕ್ತಿತುಂಬಲು ಶಕ್ತಿ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. ಶಕ್ತಿ ಯೋಜನೆ ಪರಿಣಾಮ ಧಾರ್ಮಿಕ ಸ್ಥಳಗಳು ಮತ್ತು ಪ್ರವಾಸೋದ್ಯಮ ಸಂಸ್ಥೆಗಳಿಗೆ ಭಕ್ತರ ಮತ್ತು ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಆರ್ಥಿಕವಾಗಿ ವೃದ್ಧಿ ಕಂಡಿದೆ. ಈ ಕುರಿತು ಧರ್ಮಸ್ಥಳದ ಧರ್ಮಾಧಿಕಾರಿಗಳೂ ನನಗೂ ಪತ್ರ ಬರೆದಿದ್ದಾರೆ ಎಂದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮಾತನಾಡಿ, ನೌಕರರ ಬಹುದಿನದ ಬೇಡಿಕೆಯಾಗಿದ್ದ ಈ ನಗದು ರಹಿತ ಚಿಕಿತ್ಸಾ ಸೌಲಭ್ಯವನ್ನು ಜಾರಿಗೊಳಿಸಲಾಗಿದೆ. ಇದರಿಂದ ಸುಮಾರು 34 ಸಾವಿರ ನೌಕರರು ಮತ್ತು ಅವರ ಅವಲಂಬಿತರಿಗೆ ಈ ಯೋಜನೆಯು ಸಹಾಯವಾಗಲಿದೆ ಎಂದರು.

ಶಾಸಕರು ಹಾಗೂ ಕರ್ನಾಟಕ ರಾಜ್ಯ ರಸ್ತೆ ನಿಗಮದ ಅಧ್ಯಕ್ಷರಾದ ಎಸ್.ಆರ್. ಶ್ರೀನಿವಾಸ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಿಗಮದ ನೌಕರರು ಸುಮಾರು 272 ಆಸ್ಪತ್ರೆಗಳು, 24 ಡಯಾಗ್ನೋಸ್ಟಿಕ್ ಕೇಂದ್ರ, 6 ಆಯುಶ್ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಪ್ರತಿ ದಿನ 8849 ವಾಹನಗಳ ಮೂಲಕ 28.50 ಲಕ್ಷ ಕಿ.ಮಿ. ಕ್ರಮಿಸಿ 34.92 ಲಕ್ಷ ಪ್ರಯಾಣಿಕರಿಗೆ ಸಾರಿಗೆ ಸೇವೆಯನ್ನು ಒದಗಿಸಲಾಗುತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಒಟ್ಟು 24,282 ಬಸ್ಸುಗಳನ್ನು ಹೊಂದಿದ್ದು, ದೇಶದಲ್ಲಿಯೇ ಪ್ರಥಮ ಸ್ಥಾನ ಗಳಿಸಿದೆ. ನಿಗಮಗಳಿಗೆ 4301 ಹೊಸ ಬಸ್ಸುಗಳು ಸೇರ್ಪಡೆಗೊಂಡಿವೆ. ನಾಲ್ಕು ನಿಗಮಗಳಲ್ಲಿ ಸುಮಾರು 9 ಸಾವಿರ ಹುದ್ದೆಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದೆ. ನಿಗಮದ ನೌಕರರು ನಗದು ರಹಿತ ಆರೋಗ್ಯ ಸೌಲಭ್ಯವನ್ನು ಸಹಭಾಗಿತ್ವ ಯೋಜನೆಯಡಿ, ಸರ್ಕಾರದ ಅನುದಾನದ ಜೊತೆಗೆ ನೌಕರರ ವಂತಿಕೆಯನ್ನು ಸಹ ಪರಿಗಣಿಸಲಾಗುವುದು. ಪ್ರತಿಯೊಬ್ಬರಿಗೂ ಆರೋಗ್ಯ ಕಾರ್ಡು ವಿತರಿಸಲಾಗುವುದು. ಇದರಿಂದ ನಿಗದಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಯನ್ನು ಪಡೆದುಕೊಳ್ಳಬಹುದು ಎಂದರು. ಸಾರಿಗೆ ಸುರಕ್ಷಾ ವಿಮಾ ಯೋಜನೆಯಡಿ 1 ಕೋಟಿ ರೂಪಾಯಿಗಳ ಅಪಘಾತ ವಿಮೆಯನ್ನು 24 ನೌಕರರ ಕುಟುಂಬದವರಿಗೆ ವಿತರಿಸಲಾಗಿದೆ. ನೌಕರರ ಕುಟುಂಬ ಕಲ್ಯಾಣ ಪರಿಹಾರ ಯೋಜನೆಯಡಿ ವಿವಿಧ ರೋಗಗಳಿಂದ ಮೃತ ಪಟ್ಟ ನಿಗಮದ ನೌಕರರಿಗೆ ಮೊದಲಿದ್ದ 3 ಲಕ್ಷ ಪರಿಹಾರ ಮೊತ್ತವನ್ನು 10 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ. ಇದರಲ್ಲಿ ಒಟ್ಟು 94 ಸಿಬ್ಬಂದಿಗಳ ಅವಲಂಬಿತರಿಗೆ 9.40 ಕೋಟಿ ಪರಿಹಾರವನ್ನು ನೀಡಲಾಗಿದೆ. ನಿಗಮದ 1227 ಹಳೆಯ ವಾಹನಗಳನ್ನು ಪುನಃಶ್ಚೇತನಗೊಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಿಗಮದ ವಿವಿಧ ಯೋಜನೆಗಳ ಫಲಾನುಭವಿಗಳ ಕುಟುಂಬಗಳಿಗೆ ಚೆ???ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕಿ ನಯನ ಮೋಟಮ್ಮ, ಸರ್ಕಾರದ ಮುಖ್ಯ ಸಚೇತಕರಾದ ಅಶೋಕ್ ಪಠಾಣ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

# ಸಿದ್ದೇಶ್ವರ ಅಪ್ಪಗಳ ಜೀವನವೇ ವಿಶೇಷ ಸಂದೇಶ

ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ:ಜ.6: ಮಹಾ ಮುತ್ಸದ್ದಿ ವಿಜಯಪುರದ ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿಗಳ ಜೀವನವೇ ವಿಶೇಶವಾದ ಸಂದೇಶವಾಗಿದೆ ಎಂದು ಕಾಖಂಡಕಿಯ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಹೊರವಲಯದ ಆನಂದವಾಡಿ ಹೊಲದಲ್ಲಿಯ ಚನ್ನಬಸವಣ್ಣ ಬಳತೆಯವರ ಮಹಾಮನೆಯಲ್ಲಿ ಆಯೋಜಿಸಿದ್ದ ವಿಜಯಾಪುರ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ನುಡಿನಮನ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು. ನಾವು




ಯಾವುದು ಕ್ಲಿಸ್ಟಕರ ಸಂಗತಿಯಂದು ತಿಳಿದಿರುತ್ತಿದ್ದೇವೋ ಅದನ್ನು ಸರಳ ಮಾಡಿ ತೋರಿಸಿದವರು ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು. ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು, ವೇದ, ಉಪನಿಷತ್ತು, ಪಾತಂಜಲಿ ಸೂತ್ರ, 23 ಸಾವಿರ ವಚನಗಳಿಗೂ ಸಮಾನಾದ ವಿಷಯ ಅವರು ತಿಳಿಸಿರುವ ಅಭಿವಂದನಾ ಪತ್ರದ ವಿಚಾರಗಳಲ್ಲಿವೆ. ನಮ್ಮ ಬದುಕು ಅನುಭವವೇದ ಪ್ರವಾಹವಾಗಿದೆ. ಬದುಕಿನ ಸಾರ್ಥಕತೆ ಶ್ರೀಮಂತ ಮತ್ತು ಸುಂದರ ಬದುಕಿನಲ್ಲಿದೆ. ಬದುಕಿನ ಶ್ರೀಮಂತಿಕೆ ಇರುವುದು ವಿಶ್ವ ಚಿಂತನೆ ಮತ್ತು ಸತ್ಯ ಶೋಧನೆಯಲ್ಲಿದೆ. ಹೃದಯದ ಕಡೆ ಲಕ್ಷ ವಿದ್ದರೆ ನಮ್ಮ ಬದುಕು ಸುಂದರವಾಗಿರುತ್ತದೆ. ರಾಗ, ದ್ವೇಶ ರಹಿತ ನಿಸ್ಸೀಮ ಹೃದಯಲ್ಲಿ ಸುಂದರತೆ ಅಡಗಿದೆ. ಇಂತಹ ಜೀವನ ನಡೆಸಿ ಎಲ್ಲರಿಗೂ ಮಾದರಿಯಾಗಿದ್ದರು ಸದ್ಗುರು ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಎಂದು ಹೇಳಿದರು.

ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಮಾತನಾಡಿ, ಯಾವುದು ನಮ್ಮ ಜೀವನಕ್ಕೆ ಸಂತೋಷ ಕೊಟ್ಟು ಇನ್ನೊಬ್ಬರಿಗೂ ಆನಂದ ಕೊಡತ್ತದೆಯೋ ಅದೇ ನಿಜವಾದ ಧರ್ಮ. ಉಪಯುಕ್ತ ಚಿಂತನೆಗಳು ಆಸಕ್ತರೊಂದಿಗೆ ಹಂಚಿಕೊಳ್ಳುವ ಕಾರ್ಯವಾಗಬೇಕು. ಇಂತಹ ವಿಚಾರಗಳಿಗೆ ಹೊಂದಿಕೊಂಡಿರುವ ಮಹಾನ್ ಸಂತ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಬದುಕು ಸುಂದರ ಬದುಕಾಗಿತ್ತು ಎಂದು ಹೇಳಿದರು.

ಇದೇವೇಳೆ ಬಸವರಾಜ ದೇವರು, ಬಸವಲಿಂಗಸ್ವಾಮೀಜಿಗಳು, ಪತ್ರಕರ್ತ ಶಶಿಕಾಂತ ಶೆಂಬೆಳ್ಳಿ, ಚನ್ನಬಸವಣ್ಣ ಬಳತೆ, ಗಣಪತಿ ಭೂರೆ, ಮೋಹನ ರೆಡ್ಡಿ, ಡಿ.ಡಿ.ಸಿಂಧೆ, ಶುಭಾಂಗಿ ಚನ್ನಬಸವಣ್ಣ ಬಳತೆಯವರು ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಬಗ್ಗೆ ನುಡಿನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸೋಮನಾಥಪ್ಪ ಅಸ್ಟೂರೆ, ಶಿವಾನಂದ ದಾಡಗೆ, ಸಾಗರ ಮಲಾನಿ, ಅಶೋಕ ರಾಜೋಳೆ, ಗಣಪತಿ ಬೋಚರೆ, ದೀಪಕ ಥಮಕೆ, ಸಂತೋಷ ಬಿಜಿಪಾಟೀಲ, ಜಯರಾಜ ದಾಬಶೆಟ್ಟಿ ಉಪಸ್ಥಿತರಿದ್ದರು.

ಚನ್ನಬಸವಣ್ಣ ಬಳತೆ ಸ್ವಾಗತಿಸಿದರು. ದೀಪಕ ಥಮಕೆ ನಿರೂಪಿಸಿದರು. ಶಿವಾನಂದ ದಾಡಗೆ ವಂದಿಸಿದರು.

# ವಿವಾದಿತ ಭೂಮಿಯಲ್ಲಿನ ಅತಿಕ್ರಮಣ ತೆರವಿಗೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾಟಿ ಹಾಸಗೊಂಡ)

ಭಾಲ್ಕಿ:ಜ.6:ಪಟ್ಟಣದ ಸರ್ವೆ ನಂ.204 ಮತ್ತು 205 ರ ಒಟ್ಟು ವಿಸ್ತೀರ್ಣ 12 ಎಕರೆ 29 ಗುಂಟೆ ಭೂಮಿಯಲ್ಲಿ ಸುಮಾರು ವರ್ಷಗಳಿಂದ ದಾವೆ ನಡೆಯುತ್ತಿದ್ದು, ಈ ಭೂಮಿಯಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದನ್ನು ತೆರವು ಗೊಳಿಸಬೇಕು ಎಂದು ನ್ಯಾಯವಾದಿ ಬಸವರಾಜ ಸಿರ್ಸಿಯವರು ಆಗ್ರಹಿಸಿದ್ದಾರೆ.

ಈ ಕುರಿತು ರವಿವಾರ ನಡೆದ ಪತ್ರಿಕಾಗೊಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಸರ್ವೆ ನಂ.204 ಮತ್ತು 205 ರಲ್ಲಿಯ 12 ಎಕರೆ 29 ಗುಂಟೆ ಭೂಮಿಯು ಹಳೆ ಪಟ್ಟಣದ ತೀನದುಕಾನ ಗಲ್ಲಿ ನಿವಾಸಿ ಪಾಂಡುರಂಗ ಪ್ರಭತರಾವ ಪಾಟೀಲ ಸೇರಿದಂತೆ ಇನ್ನೂ 5 ಜನ ಜಂಟಿ ಮಾಲಿಕರ ಸ್ವಾಧಿನದಲ್ಲಿದೆ. ಇದು ಸುಮಾರು ವರ್ಷಗಳಿಂದ ಹಿರಿಯ ಶ್ರೇಣಿ (ದಿವಾಣಿ) ನ್ಯಾಯಾಲಯದಲ್ಲಿ ಶಂಕ್ರೆಪ್ಪಾ ವಿರುದ್ಧ ಶೇಶಪ್ಪಾ ಸೇರಿದಂತೆ



ಹಲವರ ಮಧ್ಯ ವ್ಯಾಜ್ಯ ನಡೆ- ಯುತ್ತಿದೆ. ಆದರೆ ಪುರಸಭೆ ಮುಖ್ಯಾಧಿಕಾರಿ ಕಾನೂನು ಬಾಹಿರ ಕಾಗದಗಳನ್ನು ನೀಡಿ ಅನಧಿಕೃತ ಕಟ್ಟಡ ಕಟ್ಟಲು ಭೂಮಾಫಿಯಾಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಸಂಬಂಧ ನ್ಯಾಯಾಲಯ ಹಾಗು ಉನ್ನತ ಅಧಿಕಾರಿಗಳಿಗೆ ದೂರು ಸಲ್ಲಿಸಿದಾಗ, ಅವರು ಸದರಿ ಅಧಿಕಾರಿಗಳಿಗೆ ಕಾರಣಕೇಳಿ ಸೂಚನೆ ಜಾರಿಗೆ ಮಾಡಿದ್ದಾರೆ. ಆದರೆ ಈ ಕೆಳ ಹಂತದ ಅಧಿಕಾರಿಗಳು ಭೂಮಾಫಿಯಾ ಜೊತೆ ಸೇರಿ ಮೇಲಾಧಿಕಾರಿಗಳ ಕಾರಣ- ಕೇಳಿ ನೋಟಿಸಿಗೆ ಕಿಮ್ಮತ್ತು ಕೊಡದೇ ಸದರಿ ಸ್ಥಳದಲ್ಲಿ ಕಟ್ಟಡ ನಿರ್ಮಿಸಲು ಸಹಕರಿಸಿದ್ದಾರೆ. ಸದರಿ ಭೂಮಿಯ ಮೇಲೆ ಕಾನೂನು ಬಾಹಿರ ಅತಿಕ್ರಮಣ ಮಾಡಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮೇಲಾಧಿಕಾರಿಗಳು ಆದೇಶ ಮಾಡಿದ್ದರೂ, ಈ ಕೆಳ ಹಂತದ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಕಾರಣ ತಕ್ಷಣವೇ ಸದರಿ ಭೂಮಿಯ ಮೇಲೆ ಅತಿಕ್ರಮಣ ಮಾಡಿದ ಭೂಮಾಫಿಯಾರನ್ನು ತೆರವುಗೊಳಿಸಿ, ಇದಕ್ಕೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. 2005 ರಿಂದ ಕಾನೂನು ಹೋರಾಟ ನಡೆಸಿರುವ ನಮ್ಮ ಫಿರ್ಯಾದುದಾರ ಪಾಂಡುರಂಗ ಪರ್ಬತರಾವ ಪಾಟೀಲರಿಗೆ ನ್ಯಾಯ ಒದಗಿಸಿಕೊಡಬೇಕು. ತಪ್ಪಿದ್ದಲ್ಲಿ ಈ ಸ್ಥಳದಲ್ಲಿ ನಡೆಯುವ ಯಾವುದೇ ಅನಾಹುತಕ್ಕೆ ತಾವೇ ನೇರ ಜವಾಬ್ದಾರರಾಗಿರುತ್ತೀರಿ ಎಂದು ಸರ್ಕಾರದ ಉನ್ನತಾಧಿಕಾರಿಗಳಿಗೆ ಎಚ್ಚರಿಸಿದ್ದಾರೆ. ಒಂದು ವೇಳೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸರ್ಕಾರದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡುವುದಾಗಿ ತಿಳಿಸಿದ್ದಾರೆ.

# ದಲಿತ ಸಚಿವರುಗಳೇ ಬಿಜೆಪಿಗೆ ಟಾರ್ಗೆಟ್: ಲೋಕೇಶ್ ಮಂಗಲಗಿ

## ಬಿಜೆಪಿಗೆ ಪ್ರಿಯಾಂಕ್ ಖರ್ಗೆ ನಾಯಕತ್ವ ಬೆಳವಣಿಗೆ ಸಹಿಸಲು ಆಗುತ್ತಿಲ್ಲ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 06 : ಸಚಿವ ಪ್ರಿಯಾಂಕ್ ಖರ್ಗೆ ಅವರ ನಾಯಕತ್ವ ಬೆಳವಣಿಗೆ ಬಿಜೆಪಿಗೆ ಸಹಿಸಲು ಆಗುತ್ತಿಲ್ಲ. ದಲಿತ ಸಚಿವರುಗಳೇ ಬಿಜೆಪಿಯವರಿಗೆ ಟಾರ್ಗೆಟ್ ಆಗಿದ್ದಾರೆ ಎಂದು ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಬೀದರ್ ದಕ್ಷಿಣ ಘಟಕದ ವಕ್ತಾರ ಲೋಕೇಶ ಮಂಗಲಗಿ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಐಸಿಸಿ ಮತ್ತು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರಾದ ಆರ್ ಧರ್ಮ ಸೇನರವರ ಆದೇಶದ ಮೇರೆಗೆ, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ #We Standwith ಪ್ರಿಯಾಂಕ ಖರ್ಗೆ. ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಮಟ್ಟದ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರುಗಳು, ಬ್ಲಾಕ್ ಅಧ್ಯಕ್ಷರುಗಳು, ಪರಿಶಿಷ್ಟ ಜಾತಿ ವಿಭಾಗದ ಎಲ್ಲಾ ಜಿಲ್ಲಾ ಮಾಧ್ಯಮ ವಕ್ತಾರರು, ಮತ್ತು ಸಾಮಾಜಿಕ ಜಾಲತಾಣದ ಉಸ್ತುವಾರಿಗಳು ನಮ್ಮ ಸಮುದಾಯದ ನಾಯಕರಾದ ಪ್ರಿಯಾಂಕ ಖರ್ಗೆ ಅವರ ಪರ ನಿಲ್ಲಬೇಕಾಗಿದೆ. ಪ್ರತಿಯೊಬ್ಬರು ಮೂರು ನಿಮಿಷದ ವಿಡಿಯೋ ಮಾಡಿ 9019201612 ನಂಬರ್ ಗೆ ಕಳಿಸಿಕೊಡಿ. ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರು ಆದೇಶಿಸಿದ್ದಾರೆ. ವಿಡಿಯೋದಲ್ಲಿ ಮಾತನಾಡಬೇಕಾದ ವಿಚಾರಗಳು. ಪ್ರಿಯಾಂಕ ಖರ್ಗೆ ರಂತಹ ನಾಯಕರುಗಳ ಮೇಲೆ ಸುಖಾ ಸುಮ್ಮನೆ ಆರೋಪ ಮಾಡುವುದು ಒಂದು ರೀತಿ ಬಿಜೆಪಿ ನಾಯಕರಿಗೆ ಚಾಳಿಯಾಗಿದೆ. ದಲಿತ ನಾಯಕನನ್ನು ತೇಜೋವಧೆ ಮಾಡುವುದೇ ಬಿಜೆಪಿ ಅಜೆಂಡ. ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಿಯಾಂಕ ಖರ್ಗೆ ಕಾರಣ ಎಂದು ಸುಳ್ಳು ಆರೋಪಗಳನ್ನು ಮಾಡುತ್ತಾ ಅವರನ್ನು ರಾಜೀನಾಮೆ ನೀಡುವುದು ಎಷ್ಟು ಸರಿ? ಇವರ ಬಳಿಯಲ್ಲಿ ಯಾವುದೇ ಸಾಕ್ಷಿಗಳಿಲ್ಲ, ಯಾವುದೇ ಆಧಾರಗಳಿಲ್ಲ, ಬೇಜವಾಬ್ದಾರಿಯಿಂದ ಸುಖ ಸುಮ್ಮನೆ ಆರೋಪ ಮಾಡುತ್ತಿದ್ದಾರೆ, ಇವರು ಉದ್ದೇಶ ರಾಜ್ಯದಲ್ಲಿ ದಲಿತ ನಾಯಕರು ಬೆಳೆಯುವುದು, ದಲಿತ ನಾಯಕರ ನಾಯಕತ್ವ ಮುನ್ನೆಲೆ ಬರುವುದು, ಬಿಜೆಪಿ ಮತ್ತು ಆರ್ ಎಸ್ ಎಸ್ ಗೆ ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಬಿಜೆಪಿ ನಾಯಕರುಗಳು ರುಜು ಮಾಡಿಕೊಳ್ಳುತ್ತಿದ್ದಾರೆ, ಇತ್ತೀಚಿನ ಬೆಳವಣಿಗೆಯನ್ನು ನೋಡುತ್ತಿದ್ದಾಗ, ರಾಜ್ಯದಲ್ಲಿ ಬಿಜೆಪಿಯವರು ಮಾಡಿರುವ ಭ್ರಷ್ಟಾಚಾರಗಳನ್ನು, ಮತ್ತು ಆರ್ ಎಸ್ ಎಸ್ ಅಜೆಂಡಗಳನ್ನು, ದಲಿತ ನಾಯಕರಾದ ಪ್ರಿಯಾಂಕ ಖರ್ಗೆ ಅವರು ಪ್ರತಿನಿತ್ಯ ಪ್ರಶ್ನಿಸುತ್ತಿದ್ದಾರೆ, ಇದನ್ನು ಸಹಿಸಿಕೊಳ್ಳುವ ಸಾಧ್ಯವಾಗದಿದ್ದಾಗ ಇವರನ್ನು ತೇಜವದೆ ಮಾಡಲು ಈ ರೀತಿಯಾಗಿ ಕುತಂತ್ರ ಮಾರ್ಗಗಳು ಮಾಡಿ ದಲಿತ ನಾಯಕರುಗಳನ್ನು ಮುಗಿಸುವ ಪ್ರಯತ್ನ ಬಿಜೆಪಿ ನಾಯಕರುಗಳು ಪ್ರಯತ್ನ ಮಾಡುವುದೇ ಬಿಜೆಪಿ ಮತ್ತು ಆರ್ ಎಸ್ ಎಸ್ ಅಜೆಂಡವಾಗಿದೆ. ಇಂದು ದಲಿತ ಸಮುದಾಯವು ಬಿಜೆಪಿ ನಾಯಕರುಗಳಿಗೆ ಎಚ್ಚರಿಕೆಯನ್ನು ಕೊಡುತ್ತೇವೆ ಇಂತಹ ಗೋಡ್ಡು ಆರೋಪಗಳಿಗೆ ಮತ್ತು ರಾಜೀನಾಮೆ ಕೇಳಿದರೆ ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರುಗಳು ಬೆದರುವುದಿಲ್ಲ, ರಾಜಕೀಯ ಬಿಟ್ಟು ಹೋಗುವುದಿಲ್ಲ ಎಂಬ ಸಂದೇಶವನ್ನು ದಲಿತ ಸಮುದಾಯವು ಎಚ್ಚರಿಕೆಯಿಂದ ನೀಡುತ್ತೇವೆ. ದಲಿತ ಸಮುದಾಯವನ್ನು ಎದುರಾಕೊಂಡ್ರೆ ರಾಜ್ಯದಲ್ಲಿ ಬಿಜೆಪಿ ನಾಯಕರಿಗೆ ತಕ್ಕ ಪಾಠವನ್ನು ಕಲಿಸುತ್ತೇವೆ. ಬಿಜೆಪಿ ನಾಯಕರುಗಳಿಗೆ ಕಾಂಗ್ರೆಸ್ ಪಕ್ಷದ ನಾಯಕ ಗಳ ಮೇಲೆ ಸುಖ ಸುಮ್ಮನೆ ಆರೋಪ ಮಾಡುವುದು ಮತ್ತು ರಾಜೀನಾಮೆ ಕೇಳುವುದು ಚಾಳಿಯಾಗಿಬಿಟ್ಟಿದೆ.



ಕಾರಣ ಕರ್ನಾಟಕದಲ್ಲಿ ಬಿಜೆಪಿ ನಾಯಕರುಗಳಿಗೆ ಹೇಗೆ ವಿರೋಧ ಪಕ್ಷ ನಾಯಕರಾಗಿ ಕೆಲಸ ಮಾಡಬೇಕು ಎಂಬ ಜವಾಬ್ದಾರಿ ಇಲ್ಲ ಮತ್ತು ಆಡಳಿತ ಪಕ್ಷವನ್ನು ಹೇಗೆ ಪ್ರಶ್ನೆ ಮಾಡಬೇಕು, ಆಡಳಿತ ಪಕ್ಷದ ನಾಯಕರನ್ನು ಹೇಗೆ ಕಟ್ಟಿಗೆ ಸಿಲುಕಿಸಬೇಕು ಎಂಬ ಪರಿಜ್ಞಾನ ಬಿಜೆಪಿ ನಾಯಕರುಗಳಿಗೆ ಯಾವುದೇ ಆಧಾರಗಳು ಪತ್ತೆ ಮಾಡುವ ಪರಿಜ್ಞಾನ ಇಲ್ಲ, ಈ ರೀತಿ ಸಾಕಷ್ಟು ಉದಾಹರಣೆಗಳನ್ನು ಬಿಜೆಪಿ ನಾಯಕರು ಬಗ್ಗೆ ವಿವರಿಸಬಹುದು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿರುವುದು ಬಿಜೆಪಿ ನಾಯಕರುಗಳಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ ಕಾಂಗ್ರೆಸ್ ಪಕ್ಷದ ನಾಯಕರುಗಳು ಸರಿಯಾಗಿ ಜವಾಬ್ದಾರಿತವಾಗಿ ಆಡಳಿತ ಮಾಡುತ್ತಿದ್ದರೆ ಅವರನ್ನು ಸುಖ ಸುಮ್ಮನೆ ಸುಳ್ಳು ಆರೋಪಗಳನ್ನು ಜನರ ಮುಂದೆ ಹೇಳುತ್ತಾ, ನಗೆ ಪಾಠಗಳಿಗೆ ಬಿಜೆಪಿ ನಾಯಕರು ಪಾಲಾಗುತ್ತಿದ್ದಾರೆ, ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರನ್ನು ಆಡಳಿತ ಸಹಿಸಲು ಸಾಧ್ಯವಾಗುತ್ತಿದ್ದಾಗ ಇವರೊಬ್ಬ ಆಹಿಂದೆ ನಾಯಕ ಎಂದು ಗುರುತಿಸಿಕೊಳ್ಳುತ್ತಿದ್ದಾಗ ಇವರನ್ನು ತೇಜೋವದೆ ಮಾಡಲು ಬಿಜೆಪಿ ನಾಯಕರುಗಳು ಮೂಡ ಪ್ರಕರಣ ವಿಚಾರದಲ್ಲಿ ಬಿಜೆಪಿ ನಾಯಕರುಗಳು ಸೋತು ಸಪ್ಪಾದರು, ಅದೇ ರೀತಿಯಾಗಿ ಒಕ್ಕಲಿ ಸಮಾಯದಾಯದ ಉಪ ಮುಖ್ಯಮಂತ್ರಿಯಾದ ಡಿಕೆ ಶಿವಕುಮಾರ್ ಅವರ ಪಕ್ಷದ ನಾಯಕತ್ವ ಸಹಿಸಲು ಸಾಧ್ಯವಾಗದೇ ಇದ್ದಾಗ ಅವರನ್ನು ಸಹ ಬಿಜೆಪಿ ನಾಯಕರು ಕಾಮ ವಿಲಾಸದ ಬಗ್ಗೆ, ಹೆಣ್ಣುಮಕ್ಕಳ ಅಗೌರದ ಮಾಡುತ್ತಿರುವ ಬಿಜೆಪಿ ನಾಯಕರುಗಳ ಬಗ್ಗೆ ಜನತೆ ಮುಂದೆ ಇಟ್ಟಿದಾಗ ಡಿಕೆ ಶಿವಕುಮಾರ್ ಅಂತ ನಾಯಕರು ಮೇಲೆ ಸುಖ ಸುಮ್ಮನೆ ಆರೋಪ ಮಾಡುತ್ತಿದ್ದರು, ಅದೇ ರೀತಿಯಾಗಿ ನಮ್ಮ ಮುಸ್ಲಿಂ ಬಾಂಧದ ಅಲ್ಪಸಂಖ್ಯಾತ ನಾಯಕರುಗಳ ಮೇಲು ಸಹ ರಾಜ್ಯದಲ್ಲಿ ಯಾವುದೇ ಹಿಂದುಗಳ ಹತ್ಯೆಗಳಾಗುತ್ತಿದ್ದರು, ಇದಕ್ಕೆ ಮುಸ್ಲಿಂ ನಾಯಕಗಳೇ ಕಾರಣ ಅನ್ನೋ ರೀತಿಯಲ್ಲಿ ಸಂವಿಧಾನ ವಿರುದ್ಧ ಹೇಳಿಕೆಗಳನ್ನು ಕೊಡುತ್ತಿದ್ದರು ಅಲ್ಲೂ ಸಹ ಬಿಜೆಪಿ ನಾಯಕರುಗಳು ತಮ್ಮ ಮಾನ ಮರ್ಯಾದೆಯನ್ನು ಕಳೆದುಕೊಳ್ಳುತ್ತಿದ್ದರು. ಈ ರೀತಿಯಾಗಿ ವಿರೋಧ ಪಕ್ಷ ನಾಯಕರಾದ ಆರ್ ಅಶೋಕರವರು, ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರಿಗೆ ರಾಜ್ಯದಲ್ಲಿ ವಿರೋಧ ಪಕ್ಷದ ಆಡಳಿತ ಮಾಡುವ ಜವಾಬ್ದಾರಿ ಇಲ್ಲ, ಆಡಳಿತದ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವ ಯಾವುದೇ ಆಧಾರದ ಸಾಕ್ಷಿಗಳು ಸಿಕ್ಕುತ್ತಿಲ್ಲ, ಇದರಿಂದ ಬೇಸತ್ತ ಬಿಜೆಪಿ ನಾಯಕರುಗಳು ಯಾವುದೋ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿಗಳನ್ನು, ಕೋಮುಗಲಭೆ, ಜಾತಿ ಜಾತಿಗಳ ನಡುವೆ ಗಲಭೆಗಳನ್ನು ಸೃಷ್ಟಿಸುವ ವಿಚಾರಗಳಲ್ಲಿ, ಮಸೀದು, ಚರ್ಚ್ ಮತ್ತು ದೇವಾಲಯಗಳ ವಿಚಾರಗಳಲ್ಲಿ ಮುಂದಿಟ್ಟುಕೊಂಡು ರಾಜಕೀಯ ಮಾಡಲು ಪ್ರಯತ್ನಿಸುತ್ತಾರೆ ಹೊರತು ಇಂತಹ ವಿಚಾರಗಳಲ್ಲಿ ಕಾಂಗ್ರೆಸ್ ಪಕ್ಷದ ನಾಯಕರನ್ನು ತೇಜೋವಧೆ ಮಾಡಲು ಚಾಳಿಯಾಗಿ ಮಾಡಿಕೊಂಡು ರಾಜ್ಯದ ಜನತೆಯ ಮುಂದೆ ನಗೆ ಪಾಟಲಿಗೆ ಈಡಾಗುವುದಲ್ಲದೆ ಬಿಜೆಪಿ ಪಕ್ಷದ ಮರ್ಯಾದೆ ಕಳೆದುಕೊಳ್ಳುತ್ತಿದ್ದಾರೆ.

# ಹಲಬರ್ಗಾಕ್ಕೆ ಇಂದು ರಂಭಾಪುರಿ ಜಗದ್ಗುರು

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 06 : ಸಿದ್ಧರಾಮೇಶ್ವರ ನಮ್ಮೂರ 12ನೇ ಜಾತ್ರಾ ಮಹೋತ್ಸವ ಹಾಗೂ ಹಾವಗಿಲಿಂಗೇಶ್ವರ ಶಿವಾಚಾರ್ಯರ ದ್ವಾದಶ ಪಟ್ಟಾಧಿಕಾರ ಮಹೋತ್ಸವದಲ್ಲಿ ಪಾಲ್ಗೊಳ್ಳಲು ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಮಂಗಳವಾರ(ಜ.7) ಭಾಲ್ಕಿ ತಾಲ್ಲೂಕಿನ ಹಲಬರ್ಗಾಕ್ಕೆ ಬರಲಿದ್ದಾರೆ.

ಗ್ರಾಮದಲ್ಲಿ ಭಕ್ತರು ಅವರನ್ನು ಸ್ವಾಗತಿಸಿ ಬರಮಾಡಿಕೊಳ್ಳಲಿದ್ದಾರೆ. ಜಗದ್ಗುರುಗಳು ಬುಧವಾರ (ಜ.8) ಬೆಳಿಗ್ಗೆ 10ಕ್ಕೆ



ರಾಚೋಟೇಶ್ವರ ಸಂಸ್ಥಾನ ಮಠದಲ್ಲಿ ನಡೆಯುವ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶ್ರೀಗಳ ಅಭಿಷೇಕ ಹಾಗೂ ನಂತರ ಜರುಗುವ ಧರ್ಮ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮಠದ ಪ್ರಕಟಣೆ ತಿಳಿಸಿದೆ.

# ಬಾಗಲಕೋಟೆ ಜಿಲ್ಲೆಯಲ್ಲಿ 16.35 ಲಕ್ಷ ಮತದಾರರು : ಡಿಸಿ ಜಾನಕಿ




ಬಾಗಲಕೋಟೆ:ಜ.6: ಜಿಲ್ಲೆಯಲ್ಲಿ ಕೈಗೊಂಡ ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2025ಕ್ಕೆ ಸಂಬಂಧಿಸಿದಂತೆ ಜನವರಿ 6 ರಂದು ಜಿಲ್ಲೆಯಾದ್ಯಂತ ಅಚಿತಿಮ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಜಿಲ್ಲೆಯಲ್ಲಿ ಒಟ್ಟು 16,35,518 ಮತದಾರರು ಇದ್ದಾರೆಂದು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿ ವಿವಿಧ ರಾಜಕೀಯ ಮುಖಂಡರಿಗೆ ಅಂತಿಮ ಮತದಾರರ ಪಟ್ಟಿಗಳ ಸೆಟ್‌ಗಳನ್ನು ವಿತರಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಒಟ್ಟು 1734 ಮತಗಟ್ಟೆಗಳಿದ್ದು, ಒಟ್ಟು 16,35,518 ಮತಗಳ ಪೈಕಿ 8,06,564 ಪುರುಷ ಮತದಾರರು, 8,28,857 ಮಹಿಳಾ ಮತದಾರರು ಹಾಗೂ 97 ತೃತೀಯ ಲಿಂಗ ಮತದಾರರು ಇದ್ದಾರೆ. ಲಿಂಗಾನುಪಾತ ವಾರು ಪ್ರತಿ 1000 ಪುರುಷ ಮತದಾರರಿಗೆ 1028 ಮಹಿಳಾ ಮತದಾರರು ಇದ್ದಾರೆ. ಜನಸಂಖ್ಯಾವಾರು ಮತದಾರರ ಪ್ರಮಾಣ 100 ಜನರಿಗೆ ಶೇ.70.85 ಮತದಾರರು ಇದ್ದಾರೆ ಎಂದು ತಿಳಿಸಿದರು.

ಕಳೆದ ವರ್ಷ ಅಂತಿಮ ಮತದಾರರ ಪಟ್ಟಿಗೆ ಹೋಲಿಸಿದರೆ ಈ ವರ್ಷ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2025ರ ಸಂದರ್ಭದಲ್ಲಿ ಹೊಸದಾಗಿ 44,310 ಮತದಾರರು ಮತದಾರರ ಪಟ್ಟಿಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ. ಯುವ ಮತದಾರರು ಪುರುಷ 17884, ಮಹಿಳಾ 17328 ಹಾಗೂ ಇತರೆ ಸೇರಿ ಒಟ್ಟು 35214 ಮತದಾರರು ಇದ್ದರೆ, 85 ವರ್ಷ ಮೇಲ್ಪಟ್ಟ ಹಿರಿಯ ಮತದಾರರು ಪುರುಷ 5636, ಮಹಿಳೆ 8924 ಸೇರಿ ಒಟ್ಟು 14560 ಮತದಾರರು ಇದ್ದಾರೆ. ಒಟ್ಟು 23721 ವಿಶೇಷ ಚೇತನ ಮತದಾರರಲ್ಲಿ ಪುರುಷ 13475, ಮಹಿಳೆ 10245 ಹಾಗೂ ಇತರೆಯಲ್ಲಿ ಒಬ್ಬರು ಮತದಾರರಿದ್ದಾರೆಂದು ತಿಳಿಸಿದರು. ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಂಖಡರುಗಳು ಉಪಸ್ಥಿತರಿದ್ದರು.

# ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಪಾಲೆಸ್ಟೈನ್ ಕುರಿತು ಪುಸ್ತಕ ಬಿಡುಗಡೆ!




ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು:ಗುರುಭವನದಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಕ್ರಾಂತಿಕಾರಿಕಮ್ಯುನಿಸ್ಟ್‌ದೃಷ್ಟಿಕೋನ ಹಾಗೂ ಪ್ಯಾಲಿಸ್ಟೈನ್ ಪ್ರಶ್ನೆ ಎಡ ಪ್ರಜಾಪ್ರಭುತ್ವದೃಷ್ಟಿಕೋನ. ಇಂಗ್ಲಿಷ್ ಅವತರಣಿಕೆಪುಸ್ತಕಗಳನ್ನುಕಾಮ್ರೇಡ್ ಪಿ,ಜೆ ಜೇಮ್ಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಸಿಪಿಐಎಂಎಲ್ ರೆಡ್ ಸ್ಟಾರ್ ಇವರು ಉದ್ಘಾಟಿಸಿದರು.

ಇವತ್ತಿನವಿದ್ಯಮಾನದಲ್ಲಿಕೇಂದ್ರದ ಸಂಘಪರಿವಾರನೇತೃತ್ವದ ಬಿಜೆಪಿ ಸರ್ಕಾರನೂತನದುರ್ದಾಳಿಗಳ ವಿರುದ್ಧವಾಗಿ, ಡಾ. ಬಿಆರ್ ಅಂಬೇಡ್ಕರ್ ರವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಡಿಸೆಂಬರ್ 25.1927ರಂದು ಮನುವಾದಿ ಸಿದ್ಧಾಂತದಚಿಪುಸ್ತಕ(ಮನಸ್ಮೃತಿ) ವನ್ನುಅಂಬೇಡ್ಕರ್ ರಾಮಲೀಲಾ ಮೈದಾನದಲ್ಲಿ ಸುಟ್ಟುಹಾಕಿದರು.

ಸದರಿ ಸಿದ್ಧಾಂತದ ನೆಲಗಟ್ಟಿನ ಮೇಲೆಕೇಂದ್ರಸಮಿತಿಯಮೂರು ಸಂಗಾತಿಗಳು ಒಳಗೊಂಡು ಈ ಇಂಗ್ಲಿಷ್ ಅವತರಣಿಕೆ ಪುಸ್ತಕ ಸಿಪಿಐ ಎಂಎಲ್ ರೆಡ್ ಸ್ಟಾರ್ ಹೊರ ತಂದಿದೆ. ಇದು ಭಾರತ ದೇಶದ ಎಲ್ಲಾ ಜನ ವಿಭಾಗಕ್ಕೆ ಮಾರ್ಗದರ್ಶಕಕೈಪಿಡಿಯಾಗಿದೆ, ಹಿಂದೂ ಮಹಾಸಭಾ ಅಂಬೇಡ್ಕರ್ ಸಂವಿಧಾನ ಬರಹ ಸಂದರ್ಭದಲ್ಲಿ ವಿರೋಧಿಸಿ ಮನುಸ್ಮೃತಿಯನ್ನೇ ಈ ದೇಶದ ಸಂವಿಧಾನ ಆಗಬೇಕು ಎನ್ನುವ ದಾಖಲೆಗಳು ಆರ್ ಎಸ್ ಎಸ್ ಮುಖವಾಣಿ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು.ಹಿಂದೂರಾಷ್ಟ್ರ ಮಾಡಲು ಹೊರಟ ಮನುವಾದಿ ಆರ್ ಎಸ್ ಎಸ್ ಫ್ಯಾಸಿಸ್ಟ್‌ದಾಳಿಯ ವಿರುದ್ಧ ಇಂಡಿಯಾವನ್ನುಉಳಿಸಲು ಸಂಘರ್ಷ ತೀವ್ರಗೊಳಿಸೋಣ ಎಂದರು. ಅಂಬೇಡ್ಕರ್ ಪುಸ್ತಕವನ್ನು ಜನಕವಿ ಸಿ ದಾನಪ್ಪ ನಿಲೋಗಲ್ ಇವರು ಖಾಲಿದ್ ಚಾವುಸ್ ಇವರಿಗೆ ಪುಸ್ತಕ ನೀಡುವುದರ ಮೂಲಕಬಿಡುಗಡೆಮಾಡಲಾಯಿತು.

ಎರಡನೇ ಪುಸ್ತಕವಾದ ಪ್ಯಾಲಿಸ್ಟೈನ ಪ್ರಶ್ನೆ ಎಡ ಪ್ರಜಾಪ್ರಭುತ್ವದ ದೃಷ್ಟಿಕೋನದ ಪುಸ್ತಕ ಶ್ರೀ ಲಿಂಗಪ್ಪ ಪರಂಗಿ ಇವರು ವೀರಭದ್ರಪ್ಪ ಅಧ್ಯಕ್ಷರು ಕರ್ನಾಟಕ ರೈತ ಸಂಘ ಇವರಿಗೆ ನೀಡುವುದರ ಮೂಲಕ ಬಿಡುಗಡೆ ಮಾಡಲಾಯಿತು.

ಪ್ಯಾಲೆಸ್ಟೈನ್ ಪುಸ್ತಕದ ಬರಹಗಾರರಾದ ಕಬೀರ್ ಕೇರಳ ಪ್ಯಾಲೆಸ್ಟೈನ್ ನ ಜನಪರ ಸಂಘಟನೆಯಾದ ಹಮಾಸನ್ನು(ಊಂಒಂಖ)ಉಗ್ರವಾದಿ ಸಂಘಟನೆ ಎಂದು ಅಮೆರಿಕ ಸಾಮ್ರಾಜ್ಯಶಾಹಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚೋದಿಸುತ್ತದೆ. ಇದರ ವಿರುದ್ಧವಾಗಿ ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ, ನೈಜ ಪ್ಯಾಲಿಸ್ಟೈನದ ವಿದ್ಯಮಾನವನ್ನು ಬಹಿರಂಗಪಡಿಸುವ ಪುಸ್ತಕ ಇದಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿ-ಯಾಗಿ ಪಕ್ಷದ ಹಿರಿಯರಾದ ಕೆ ಎನ್ ರಾಮಚಂದ್ರನ್ ರವರು ಡಾಕ್ಟರ್ ಬಿಆರ್ ಅಂಬೇಡ್ಕರ್ ಅವರ ಐತಿಹಾಸಿಕ ಚರಿತ್ರಾತ್ಮಕ ಬರಹಗಳನ್ನುಹಾಗೂ ಮನುವಾದಿ ಫ್ಯಾಸಿಸ್ಟ್ ಪ್ರತಿರೋಧದ ಹೋರಾಟಗಳನ್ನು ಸ್ವೀಕರಿಸಿ ಇಂದಿನ ವಿದ್ಯಾಮಾನಕ್ಕೆ ಅತಿ ಅವಶ್ಯಕವಾದ ವಿಷಯಗಳನ್ನು ಒಳಗೊಂಡ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಪುಸ್ತಕ ಪಕ್ಷದಿಂದ ಪ್ರಕಟಿಸಿದ್ದು ಇದೆ ಎಂದು ಹೇಳಿದರು. ಈ ವೇಳೆ ಪುಸ್ತಕ ಬರಹಗಾರರಾದ ಶಂಕರ್ ಪಶ್ಚಿಮ್ ಬಂಗಾಳ, ವಿಜಯ ಮಧ್ಯಪ್ರದೇಶ, ಪಕ್ಷದ ಪಾಲಿಟಿ ಬ್ಯುರೋ ಸದಸ್ಯರಾದ ಆರ್ ಮಾನಸಯ್ಯ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ ಎಂಎಲ್ ರೆಡ್ ಸ್ಟಾರ್ ಪಕ್ಷದ ರಾಜ್ಯ ಕಾರ್ಯದರ್ಶಿಯಾದ ಬಿ ರುದ್ರಯ್ಯ ವಹಿಸಿದ್ದರು. ಈ ಕಾರ್ಯಕ್ರಮಕ್ಕೆ ತಾಲೂಕು ಮತ್ತು ಜಿಲ್ಲೆಯ ಸಂಘಟನೆಯ ನೇತಾರರು ಭಾಗವಹಿಸಿದ್ದರು.

# ಉಪಾಧ್ಯಕ್ಷರಾಗಿ ಶೇಖರ ಹೊಸಳ್ಳಿ ಅವಿರೋಧವಾಗಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ತಾಲ್ಲೂಕಿನ ಹತ್ತಿಕುಣಿ ಗ್ರಾಮ ಪಂಚಾಯತ ಉಪಾಧ್ಯಕ್ಷರಾಗಿ ಶೇಖರ ತಂ, ಹಣಮಂತ ಹೊಸಳ್ಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ,

ಈ ಹಿಂದೆ ಉಪಾಧ್ಯಕ್ಷರಾಗಿದ್ದ ಥಾವುರು ರಾಜಿನಾಮೆ ನೀಡಿದ ಪ್ರಯುಕ್ತ ಪಂಚಾಯತ ಸಭಾಂಗಣದಲ್ಲಿ ನಡೆದ ಉಪಾಧ್ಯಕ್ಷ ಸ್ಥಾನ ಆಯ್ಕೆ ಚುನಾವಣೆಯಲ್ಲಿ ಶೇಖರ್ ಹೊಸಳ್ಳಿ ಮಾತ್ರ ಏಕೈಕ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಚುನಾವಣಾಧಿಕಾರಿಯಾಗಿದ್ದ ತಹಸಿಲ್ದಾರ ಸುರೇಶ ಅಂಕಲಗಿ ಅವರು ನಾಮಪತ್ರ ಪರಿಶೀಲನೆ ಮಾಡಿ, ಕೆಲ ಸಮಯದ ನಂತರ ಹೊಸಳ್ಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಸಭೆಯಲ್ಲಿ ಒಟ್ಟು 23 ಸದಸ್ಯರ ಪೈಕಿ, 20 ಪಂಚಾಯತ ಸದಸ್ಯರು ಭಾಗವಹಿಸಿದ್ದರು.

ಹೊಸಳ್ಳಿ ಆಯ್ಕೆಯಾದ ನಂತರ ಗ್ರಾ.ಪಂ ಅಧ್ಯ-ಕ್ಷೆ ಅನ್ನಪೂರ್ಣಮ್ಮ ಅಮೀನರಡ್ಡಿ ಬಿಳ್ಹಾರ, ಪಂಚಾಯತ ಅಭಿವೃದ್ಧಿ ಅಧಿಕಾರಿ ನಿಂಗಣ್ಣ, ಸದಸ್ಯರಾದ ಅಮೃತರಡ್ಡಿ ಪಾಟೀಲ್, ಸಾಬರಡ್ಡಿ ತಮ್ಮಣ್ಣೋರ, ಸುಭಾಷ ನಾಯಕ, ಸಾಬಣ್ಣ ಸೋಮಣ್ಣೋರ, ಕೀರಲಿಂಗ ಗಣಪೂರ, ಮಲ್ಲಿಕಾರ್ಜುನ ಕಜ್ಜಿ. ಹಣಮಂತ ಸಮನಾಪೂರ, ಭೀಮರಾಯ ಬಾಚವಾರ, ಮುಖಂಡರಾದ ದೇವಿಂದ್ರಪ್ಪ ಖಂಡಪ್ಪನೋರ, ಸಾಬಣ್ಣ ಬಾವನೋರ, ಖುದಾನಸಾಬ್ ಇನಾಂದಾರ್, ದೇವು ಹೋರುಂಚಾ, ಮಲ್ಲು ದೇವಕರ, ಸಿದ್ದು ನಾಯಕ, ಮಲ್ಲು ಬೂದೂರ, ಬಸ್ಸು ಗೌಡಗೇರಿ, ಸುರೇಶ, ಸಣ್ಣಮೀರ ಯಾದವ್, ಅಂಬು ನಾಯಕ, ರಾಜು ಗುಂಡೇನೋರ, ಹಣಮಂತ ಭೀಮಶಪ್ಪನೋರ, ಶ್ರೀಕಾಂತ ಬಾಚವಾರ ಹಲವರು ಅವರನ್ನು ಅಭಿನಂಧಿಸಿದರು.

# ಇಬ್ರಾಹಿಂಸಾಬ ಬಿಸನಳ್ಳಿ ಭಾಗ್ಯನಗರ ಪಟ್ಟಣ ಪಂಚಾಯತ ಸದಸ್ಯರಾಗಿ ನಾಮ ನಿರ್ದೇಶನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಭಾಗ್ಯನಗರದ ಹಿರಿಯ ವಕೀಲರು ಹಾಗೂ ಜಾಮಿಯಾ ಮಜೀದ್ ಕಮಿಟಿಯ ಅಧ್ಯಕ್ಷರಾದ ಇಬ್ರಾಹಿಂ ಸಾಬ್ ಬಿಸನಳ್ಳಿ ಸೇರಿದಂತೆ ಮೂವರನ್ನು ಭಾಗ್ಯನಗರ ಪಟ್ಟಣ ಪಂಚಾಯತ್ ನಾಮನಿರ್ದೇಶನ ಸದಸ್ಯರನ್ನಾಗಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಪುರಸಭೆ ಕಾಯ್ದೆ-1964ರ ಪ್ರಕರಣ 352(1) (ಬಿ)ರಡಿಯಲ್ಲಿ ಮುಂದಿನ ಆದೇಶದವರೆಗೆ ಕೊಪ್ಪಳ ಜಿಲ್ಲೆಯ ಭಾಗ್ಯನಗರ ಪಟ್ಟಣ ಪಂಚಾಯತಿಗೆ ಸದಸ್ಯರನ್ನಾಗಿ ಇಬ್ರಾಹಿಂಸಾಬ ರಾಜಾಸಾಬ ಬಿಸನಳ್ಳಿ. ಹನುಮಂತಪ್ಪ ಪರಮೇಶ್ವರಪ್ಪ ಬಂಡಿ, ಶ್ರೀಮತಿ ಸವಿತಾ ಅಶೋಕ ಗೋರಂಟ್ಲಿಯವರನ್ನು ನಾಮ ನಿರ್ದೇಶನ ಮಾಡಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಭಾಗ್ಯನಗರ ಪಟ್ಟಣ ಪಂಚಾಯತಗೆ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿದ್ದಕ್ಕಾಗಿ ಶಾಸಕರಾದ ರಾಘವೇಂದ್ರ ಹಿಟ್ನಾಳ್ ಸಂಸದರಾದ ರಾಜಶೇಖರ ಹಿಟ್ನಾಳ್ ಹಾಗೂ ಕಾಂಗ್ರೆಸ್ ಮುಖಂಡರಿಗೆ ಇಬ್ರಾಹಿಂ ಸಾಬ್ ಬಿಸನಳ್ಳಿ ಧನ್ಯವಾದ ಅರ್ಪಿಸಿದ್ದಾರೆ.

# ಬಸವಾದಿ ಶರಣ ವಚನಗಳು ಬದುಕಿಗೆ ದಾರಿ ದೀಪಗಳಾಗಿವೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಬಸವಾದಿ ಶರಣ ವಚನಗಳು ಬದು-ಕಿಗೆ ದಾರಿ ದೀಪಗಳಾಗಿವೆ ಎಂದು ಪ್ರೊ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶಂಭುಲಿಂಗ ಕಾಮಣ್ಣ ಹೇಳಿದರು. ಇಲ್ಲಿನ ತಿಪುರಾಂತಿನ ಸಂಸ್ಥಾನ ಗವಿಮಠದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಲ್ಯಾಣ ಮತ್ತು ತಾಲೂಕ ಕನ್ನಡ ಸಾಹಿತ್ಯ ಪರಿಷತ್. ಅಭಿನವ ಶ್ರೀ ಪ್ರಕಾಶನ ಪ್ರತಿಮ ಪ್ರಕಾಶನದ ಆಯೋಜಿಸಿದ್ದ ಶರಣ ಕಾಯಕ ಪ್ರಶಸ್ತಿ ಪ್ರದಾನ ಹಾಗೂ ಕವಿ ವೀರಶೆಟ್ಟಿ ಎಂ.ಪಾಟೀಲ ಅವರು ಅಗೋ ಅಲ್ನೋಡಿ ಮತ್ತೆ ಕಲ್ಯಾಣಕ್ಕೆಬರುತ್ತಿರುವರು ಶರಣರು ಸಂಪಾದಿತ ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಪರಿಚಯಿಸಿ ಮಾತನಾಡಿ ಗ್ರಂಥಗಳು ಮನಸಿಗೆ ಹಾಗೂ ಮನಕ್ಕೆ ಸಂತೋಷ ನೀಡುತ್ತವೆ ಆದರೆ ಇಂದಿನ ದಿನಮಾನಗಳಲಿ ಗ್ರಂಥಗಳು ಓದುವ ಸಂಖ್ಯೆ ಕಡಿಮೆ ಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕವನ ಸಂಕಲನ ಬಿಡುಗಡೆ ಮಾಡಿದ ನಗರ ಪೊಲೀಸ್ ಠಾಣೆಯ ಸಿ. ಪಿ. ಐ. ಅಲಿಸಾಬ ಮಾತನಾಡಿ ಸಾಹಿತ್ಯದ ಬಗ್ಗೆ ಆಸಕ್ತಿ ಇದ್ದ ಕಾರಣ ವಿಧ್ಯಾರ್ಥಿ ದಿಶೆಯಲ್ಲಿಯೆ ನಾನು ಕೆಲವು ಕವನಗಳು ಬರೆದಿದ್ದೆ ಇಂದು ಯುವ ಸಮೂಹದಲ್ಲಿ ಪುಸ್ತಕ ಓದುವ ಆಸಕ್ತಿ ಬೆಳೆಸ ಬೇಕಾದ ಜರೂರಿ ಇದೆ ಎಂದರು. ಜಿಲ್ಲಾ ಕಸಾಪ ಕೋಶಾಧ್ಯಕ್ಷರಾದ ಶಿವಶಂಕರ ಟೋಕರೆ ಮಾತನಾಡಿ ಕವಿ ಸಾಹಿತಿ ಗಳಾದ ವೀರಶೆಟ್ಟಿ ಪಾಟೀಲ್ ಅವರು ತಮ್ಮ ಮಗನ ಸಾತ್ವಿಕನ ಹುಟ್ಟುಹಬ್ಬದ ನೆಪದಲ್ಲಿ 7 ವರ್ಷಗಳ ಪರಿಯಂತ ಗ್ರಂಥ ಪ್ರಕಟಿಸಿ ಸಾಹಿತ್ಯಕ ವಾತಾವರಣ ಮೂಡಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಾಲಕ ಸಾತ್ವಿಕ ವಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು. ಸಾನಿಧ್ಯ ವಹಿಸಿದ್ದ ತಿಪುರಾಂತಿನ ಸಂಸ್ಥಾನ ಗವಿಮಠದ ಪೂಜ್ಯ ಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಎಂತಹ ಕಟ್ಟಡ ಕಟ್ಟಿದರು ಬಿದ್ದು ಹೋಗುತ್ತದೆ ಕೊಟ್ಟಿರುವಂತಹ ದುಡ್ಡು ಖರ್ಚಾಗಿ ಹೋಗುತ್ತದೆ. ಆದರೆ ದೊರೆತಿರುವಂತಹ ಸಾಹಿತ್ಯಕ್ಕೆ ಎಂದು ಸಾವಿಲ. ಮಗನ ಹುಟ್ಟು ಹಬ್ಬದೂಂದು ಪ್ರತಿ ವರ್ಷ ಪಾಟೀಲರು ಒಂದೂಂದು ಗ್ರಂಥ ಲೋಕಾರ್ಪಣೆ ಮಾಡುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಅಭಿನವ ಶ್ರೀಗಳು ಶಂಬುಲಿಂಗ ಕಾಮಣ್ಣ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಸಂತೋಷ ಅಕ್ಕಣ. ಹುಲಸೂರ ತಾಲೂಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ನಾಗರಾಜ್ ಹಾವಣ್ಣ. ವಿಶ್ವನಾಥಯ್ ಮಠಪತಿ. ಸೂರ್ಯಕಾಂತ ಮೈಲಾರೆ. ಅವರಿಗೆ ಶರಣ ಕಾಯಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ನಿವೃತ್ತ ಉಪನ್ಯಾಸಕರಾದ ತುಳಸಿರಾಮ ಕುಂಬಾರೆ. ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ. ಡಾ. ಚಿತ್ರಶೇಖರ ಚಿರಳ್ಳಿ. ಡಾ. ವಿ. ಎಸ್. ಮಂಡಿ. ಗೋವಿಂದರಡ್ಡಿ ಕೋತಾಪಲ್ಲೆ. ಬಸವರಾಜ ಶೇರಿ. ಪತ್ರಕರ್ತರಾದ ನಾಗಪ್ಪಾ ನಿಣ್ಣೆ. ಡಿ.ಕೆ.ಪ್ರಹ್ಲಾದ. ಹಾಗೂ ಮಾಣಿಕ ಸಂಗನಬಟ್ಟೆ. ರಾಜಕುಮಾರ ಮದಕಟಿ. ನಿವೃತ್ತ ಮುಖ್ಯ ಗುರುಗಳಾದ ಬಸವರಾಜ ಸ್ವಾಮಿ ರೋಳಾ. ಸೈಯದ್ ಮಗದುಮಶಾ. ಡಾ. ವಿ. ಎಸ್. ರಾಜೋಳೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶಾಂತಲಿಂಗ ಮಠಪತಿ ಪ್ರಸ್ತಾವಿಕ ನುಡಿ. ಸ್ವಾಗತ ನಿತೀನ ನೀಲಕಂಟೆ. ಶಿಕ್ಷಕರಾದ ನಾಗೇಂದ್ರ ಬಿರಾದಾರ ನಿರೂಪಿಸಿದರು. ಪ್ರತಿಮ ವಿ. ಪಾಟೀಲ ವಂದಿಸಿದರು.



ಬಸವಕಲ್ಯಾಣ :-ತಾಲ್ಲೂಕಿನ ತಾಲ್ಲೂಕಿನ ಹಾರಕೂಡ ಗ್ರಾಮದಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳ 73 ನೇಯ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಆಯೋಜಿಸಿದ್ದ ಶಿವಾನುಭವ ಚಿಂತನ ಗೋಷ್ಠಿಯ ಕಾರ್ಯಕ್ರಮದಲ್ಲಿ ದಾರವಾಡದ ಮುರಘಾ ಮಠದ ಪೂಜ್ಯ ಶ್ರೀ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಬೈಲೂರಿನ ನಿಜಗುಣ ಪ್ರಭು ತೋಂಟದಾರ್ಯ ಮಹಾಸ್ವಾಮಿಗಳು ಅವರಿಗೆ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಬಸವ ಭಾನು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಖಂಡ್ರೆ. ಶಾಸಕರಾದ ಶರಣು ಸಲಗರ್. ಜಗನ್ನಾಥ ಪಾಟೀಲ. ಧನರಾಜ್ ತಾಡಂಪಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಕ್ಷಯ ರೋಗ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಗೆ ಮಾದರಿಯಾದ ಹತ್ತಿಕುಣಿ ಪ್ರಾಥಮಿಕ ಆರೋಗ್ಯ ಕೇಂದ್ರ : ಡಾ. ರಾಯಚೂರಕರ್



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯು ಕ್ಷಯ-ರೋಗ ನಿಯಂತ್ರಣಕ್ಕೆ ಸಾಕಷ್ಟು ಶ್ರಮಿಸುತ್ತಿದೆ, ಅದರಲ್ಲಿ ತಾಲ್ಲೂಕಿನ ಹತ್ತಿಕುಣಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈಧ್ಯರು ಹಾಗೂ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಶ್ರಮಿಸುವ ಮೂಲಕ ಎಲ್ಲರಿಗೆ ಮಾದರಿಯಾಗಿದ್ದಾರೆ ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಸಂಜೀವ್ ಕುಮಾರ್ ರಾಯಚೂರಕರ್ ಹೇಳಿದರು.

ತಾಲ್ಲೂಕಿನ ಹತ್ತಿಕುಣಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕ್ಷಯರೋಗಿಗಳಿಗೆ ರೋಗನಿರೋಧಕ ಶಕ್ತಿ, ಪೌಷ್ಟಿಕ ಆಹಾರ ಪದಾರ್ಥಗಳ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿಗಳು ಮತ್ತು ವೈದ್ಯಾಧಿಕರಗಳ ಕಾರ್ಯವನ್ನು ಪ್ರಶಂಸಿಸಿದ ಅವರು ಗ್ರಾಮದ ಜನಪ್ರತಿನಿಧಿಗಳು ಹಾಗೂ ಸಂಘಟನೆ ಅವರು ಕ್ಷಯ ರೋಗಿಗಳ ದತ್ತು ಪಡೆಯಲು ಮನವಿ ಮಾಡಿಕೊಂಡರು.

ಕ್ಷಯ ರೋಗಿಗಳಿಗೆ ಕ್ಷಯ-ರೋಗದ ಬಗ್ಗೆ ಭಯ ಬೇಡ ಎಚ್ಚರವಿರಲಿ, ಅಗತ್ಯ ಸಮಯದಲ್ಲಿ ವೈಧ್ಯರಿಂದ ಅಗತ್ಯ ಚಿಕಿತ್ಸೆ ಪಡೆದು ಆರೋಗ್ಯದಿಂದ ಬಾಳಿರಿ ಎಂದು ಕಿವಿಮಾತು ನೀಡಿದರು.

ಟಿಹೆಚ್‌ಒ ಡಾ. ಹಣಮಂತ್ ರೆಡ್ಡಿ ಕಾರ್ಯಕ್ರಮ ಕುರಿತು ಮಾತನಾಡಿದರು ಮತ್ತು ಕಾರ್ಯಕ್ರಮದಲ್ಲಿ ಎಲ್ಲಾ ರೋಗಿಗಳಿಗೆ ಕ್ಷಯ ರೋಗದ ಲಕ್ಷಣಗಳು ಮತ್ತು ಅದು ಹೇಗೆ ಬರುತ್ತೆ ಅದರ ಶಯರೋಗದ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಮಾಹಿತಿ ನೀಡಿದರು

ನೂರು ದಿನಗಳ ಕ್ಷಯ-ರೋಗ ಮುಕ್ತ ಕಾರ್ಯಕ್ರಮ ಅಭಿಯಾನದ ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹತ್ತಿಕುಣಿಯಲ್ಲಿ ಸಂಶಯಾಸ್ಪದ ಕ್ಷಯ ರೋಗಿಗಳು ಮತ್ತು ಕ್ಷಯರೋಗದ ಲಕ್ಷಣಗಳಿರುವ ರೋಗಿಗಳಿಗೆ ಚೆಸ್ಟ್ ಎಕ್ಸ್ ರೇ ಮಾಡಲಾಗಿತ್ತು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯವರು ಕ್ಷಯ ರೋಗಿಗಳನ್ನು ದತ್ತು ಪಡೆದು ನಿಕ್ಷ ಮಿತ್ರ ಯೋಜನಾ ಅಡಿಯಲ್ಲಿ ಪೌಷ್ಟಿಕ ಆಹಾರದ ಕಿಟ್ ಗಳನ್ನು ಕ್ಷಯ ರೋಗಿಗಳಿಗೆ ವಿತರಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ. ಬಸರಡ್ಡಿ ಪಾಟೀಲ್ ಗಾಜರಕೋಟ್, ತಾಲೂಕ ಚಿಕಿತ್ಸೆ ಮೇಲ್ವಿಚಾರಕರಾದ ಮಸೂದ್ ಹಾಗೂ ಸುಭಾಷ್ ರೆಡ್ಡಿ ತಾಲೂಕ ಪ್ರಯೋಗಶಾಲ ಮೇಲ್ವಿಚಾರಕರು, ಆಶಾಕಾರ್ಯಕರ್ತರು ರೋಗಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹಿರಿಯ ನಿರೀಕ್ಷಣಾಧಿಕಾರಿಗಳು ದೇವೇಂದ್ರಪ್ಪ ನಿರೂಪಿಸಿ, ವಂದಿಸಿದರು.

# ಚನ್ನವೀರ ಶಿವಾಚಾರ್ಯರ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಿದ ಶ್ರೀ ಚನ್ನಬಸವ ಶಿವಯೋಗಿಗಳ ರಥೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಆರಂಭದ ದೀವಸ ಚನ್ನಬಸವ ಶಿವಯೋಗಿಗಳ ರಥೋತ್ಸವ ಅದ್ದೂರಿಯಾಗಿ ಜರುಗಿತು. ರಥೋತ್ಸವದಲಿ ಸಾವಿರಾರು ಭಕ್ತರ ಮಧ್ಯೆ ಚನ್ನಬಸವ ಶಿವಯೋಗಿ ಮಹಾರಾಜಕಿ ಜೈ. ಎಂದು ಜೈಘೊಷ ಹಾಕುತ್ತ ಥೇರು ಎಳೆಯಲಾಯಿತು. ಮೆರವಣಿಗೆಯಲ್ಲಿ ಭಜನಾ ತಂಡ. ಕುಂಭ. ಕಳಸ. ಹೊತ್ತ ಮಹಿಳೆಯರು ವಾದ್ಯ ಮೇಳಗಳೊಂದಿಗೆ ಮೆರವಣಿಗೆ ನಡೆಯಿತು. ಮಠದ ಪಿಠಾಧಿಪತಿಗಳಾದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ತಲೆಯ ಮೇಲೆ ವಿಶಿಷ್ಟವಾದ ಟೊಪ್ಪಿಗೆ ಕೈಯಲ್ಲಿ ತಿಣಟಿಜಜಜಿಟಿಜಜಶೂಲ ಹಿಡಿದು ಭಾಗವಹಿಸಿದ್ದರು. ಈ ವೇಳೆ ಧಾರವಾಡದ ಮುರಘಾ ಮಠದ ಪೂಜ್ಯ ಶ್ರೀ ಡಾ. ಮಲ್ಲಿಕಾರ್ಜುನ ಸ್ವಾಮೀಜಿ. ಹಾಗೂ ಬೈಲೂರಿನ ನಿಜಗುಣ ಪ್ರಭು ತೋಂಟ-ದಾರ್ಯ ಮಹಾಸ್ವಾಮಿಗಳು. ಶಾಸಕರಾದ ಶರಣು ಸಲಗರ್. ಹುಮನಾಬಾದ್ ಶಾಸಕರಾದ ಡಾ. ಸಿದ್ದಲಿಂಗಪ ಪಾಟೀಲ. ಶಾಸಕರಾದ ಬಸವರಾಜ ಮತ್ತಿಮೂಡ. ಜಗನ್ನಾಥ ಪಾಟೀಲ. ಮಾಜಿ ಶಾಸಕರಾದ ರಾಜಶೇಖರ ಪಾಟೀಲ ತೆಲೂಕರ್ ಸಿದಾಣಟಿಜಜಜಿಟಿಜಜಮಗುದಗೆ. ಸೇರಿದಂತೆ ಅನೇಕರು ಭಕ್ತರು ಭಾಗವಹಿಸಿದ್ದರು.

# ಚಿಟಗುಪ್ಪ; ಪಿಕೆಪಿಎಸ್ ಗೆ ನಿರ್ದೇಶಕ ಅಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಇಲ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ 12 ಸದಸ್ಯರ ಆಯ್ಕೆಗೆ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ರವಿವಾರ ಚುನಾವಣೆ ನಡೆಯಿತು. ಸಂಜೆ ಮತ ಎಣಿ-ಕೆ ನಡೆದು ಫಲಿತಾಂಶವನ್ನು ಚುನಾವಣಾಧಿಕಾರಿ ಕೆರೆಸಿದ್ದ ಮೋರಟಗಿ ಘೋಷಣೆ ಮಾಡಿದರು. ಸಾಲಗಾರರ ಸಾಮಾನ್ಯ ಸ್ಥಾನಕ್ಕೆ 05, ಮಹಿಳಾ ಸ್ಥಾನಕ್ಕೆ 02, ಪರಿಶಿಷ್ಟ ಜಾತಿಗೆ 01, ಪರಿಶಿಷ್ಟ ಪಂಗಡಕ್ಕೆ 01 ಪ್ರವರ್ಗ (ಎ) 01 ಪ್ರವರ್ಗ (ಬಿ) ಹಾಗೂ ಸಾಲಗಾರರಲ್ಲದ 1 ಸ್ಥಾನ ಒಟ್ಟು 12 ಸ್ಥಾನಗಳು ಮೀಸಲಾಗಿದ್ದವು. ಸಾಲಗಾರರ ಪ್ರವರ್ಗ (ಎ) ಸ್ಥಾನಕ್ಕೆ ಮೊಯಿಜೋದ್ದಿನ ಬಾರುದವಾಲೇ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 11 ಸ್ಥಾನಗಳಿಗೆ ನಡೆದ ಚುನಾವಣೆ ಫಲಿತಾಂಶ ಈ ಕೆಳಗಿನಂತಿದೆ. ಸಾಲಗಾರರ ಸಾಮಾನ್ಯ ಸ್ಥಾನ: ಮಹಾರುದ್ರಯ್ಯ ಸ್ವಾಮಿ, ಸಿದ್ದ-ರೊಡ ಶಿವಲಿಂಗಪ್ಪ, ಇಸ್ಮಾಯಿಲ್ ಲಾಥೋಡ್, ಪಾಂಡುರಂಗ ಮನೋಹರ, ಸೈಯದ್ ರಾಶೀದ ಪಟೇಲ್, ಸಾಲಗಾರರ ಹಿಂದುಳಿದ 'ಬಿ' ವರ್ಗ ಸ್ಥಾನ: ಸುನೀಲಕುಮಾರ ಅಮೃತರಾವ, ಸಾಲಗಾರರ ಪರಿಶಿಷ್ಟ ಜಾತಿ ಸ್ಥಾನ: ಅಂಬಾದಾಸ್ ಶಂಕರರಾವ, ಸಾಲಗಾರರ ಪರಿಶಿಷ್ಟ ಪಂಗಡ ಸ್ಥಾನ: ಅಮೃತ ಶೀಲಪ್ಪ, ಮಹಿಳಾ ಸ್ಥಾನ: ಈರಮ್ಮಾ ರಾಮಲಿಂಗ ರೆಡ್ಡಿ, ಜ್ಯೋತಿ ಗುಣವಂತ, ಸಾಲಗರರಲ್ಲದ ಸ್ಥಾನ: ಪ್ರಕಾಶ ತಿಪ್ಪರಾಜಿ ಗೌಳಿ ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿ ಕೆರೆಸಿದ್ದ ಮೋರಟಗಿ ತಿಳಿಸಿದ್ದಾರೆ.

# ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಬೀಪ್ಸ್ ಶ್ರಮ–ಡಿಸಿ ಜಾನಕಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.6–ಬಸವೇಶ್ವರ ಅಂತರಾಷ್ಟ್ರೀಯ ಪಬ್ಲಿಕ ಶಾಲೆ ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ಹೇಳಿದರು.

ನಗರದ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ನೂತನ ಸಭಾಭವನದಲ್ಲಿ ಶನಿವಾರ ನಡೆದ ಬವಿವಿ ಸಂಘದ ಪ್ರತಿಷ್ಠಿತ ಬಸವೇಶ್ವರ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆಯ (ಬೀಪ್ಸ್) ವಾರ್ಷಿಕೋತ್ಸವ ಇಫೋರಿಯಾ 2025 ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಹುಟ್ಟಿದ ಪ್ರತಿಯೊಂದು ಮಗುವಿನಲ್ಲಿ ಒಂದು ಪ್ರತಿಭೆ ಇದ್ದೇ ಇರುತ್ತದೆ, ಆ ಪ್ರತಿಭೆಯನ್ನು ಗುರುತಿಸಿ ಅದಕ್ಕೆತಕ್ಕಂತೆ ಪೂರಕವಾಗಿ ಬೆಳೆಸುವ ಜವಾಬ್ದಾರಿ ಪಾಲಕರ ಹಾಗೂ ಶಿಕ್ಷಕರ ಮೇಲಿದೆ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ದೃಷ್ಠಿಕೋಣದಿಂದ ಬಸವೇಶ್ವರ ಅಂತರಾಷ್ಟ್ರೀಯ ಪಬ್ಲಿಕ ಶಾಲೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆ ಇಂಥ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಹೆಮ್ಮೆ ಮತ್ತು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ ಮಾತನಾಡಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ರೂಪಿಸುವ ದೃಷ್ಠಿಯಲ್ಲಿ ನಮ್ಮ ಶಾಲೆ ಶ್ರಮಿಸುತ್ತಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಮಹೇಶ ಮಾಶಾಳ, ಶಿಕ್ಷಕ ಹಾಗೂ ಮಕ್ಕಳಲ್ಲಿನ ಕಲಿಕಾ ನ್ಯೂನ್ಯತೆಗಳನ್ನು ಹೋಗಲಾಡಿಸಲು ಹಲವಾರು ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಡುತ್ತಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾಡಿನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಮುಂದಿನ ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಬೇಕಾಗುವ ಮೂಲಭೂತ ಸೌಲಭ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆನ್ನುವುದು ನಮ್ಮ ಕಾರ್ಯಾಧ್ಯಕ್ಷರ ಸದಾಶಯವಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಸಿ.ಬಿ.ಸುರೇಶ್ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು, ಮಂಗಳಗೌರಿ ಹೆಗಡೆ ಶಾಲಾ ವಾರ್ಷಿಕ ವರದಿಯನ್ನು ಓದಿದರು. ವಿದ್ಯಾರ್ಥಿ ಪ್ರತಿನಿಧಿಗಳಾದ ಪ್ರತಿ–ಕ್ಷಾ ಮುಕ್ಕಣ್ಣವರ, ನಿಂಗರಾಜ. ಹೀರೆನಿಂಗಪ್ಪನವರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 10ನೇ ವರ್ಗ ಹಾಗೂ ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಹಾಗೂ ಹಾಕಿಯಲ್ಲಿ ರಾಷ್ಟಮಟ್ಟದ ಸಾಧನೆ ಮಾಡಿದ ವಿದ್ಯಾರ್ಥಿಗಳು ಮತ್ತು ಅಟಲ್ ಟಿಂಕರಿಂಗ್ ವಿಭಾಗದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಅಭಯ್ ಪಾರ್ಸಿಯವರ ಅವರನ್ನು ಸನ್ಮಾನಿಸಲಾಯಿತು.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ನೌಕರರ ಕ್ರೀಡಾಕೂಟ

# 15 ಪ್ರಶಸ್ತಿಗಳನ್ನು ಪಡೆದುಕೊಂಡ ಜಿಲ್ಲಾ ಪಂಚಾಯತ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಜನವರಿ 06– ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 3 ರಿಂದ 5 ವರೆಗೆ ಮೂರು ದಿನಗಳ ಕಾಲ ಜರುಗಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಕ್ರೀಡಾಕೂಟದಲ್ಲಿ ಜಿಲ್ಲಾ ಪಂಚಾಯತಿಗೆ ವಿವಿಧ ಕ್ರೀಡೆಗಳಲ್ಲಿ ಒಟ್ಟು 15 ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಕ್ರೀಡಾಕೂಟದಲ್ಲಿ ಪ್ರಥಮ ಬಾರಿಗೆ ಪಥಸಂಚಲನವನ್ನು ಆಯೋಜಿಸಲಾಗಿದ್ದು ಅದರಲ್ಲಿ ಬಾಗಲಕೋಟೆ ಜಿಲ್ಲಾ ಪಂಚಾಯತಿಯು ಪ್ರಥಮ ಸ್ಥಾನ ಪಡೆದುಕೊಂಡಿದೆ. ಅಲ್ಲದೇ ಚೆಸ್ ಪುರುಷರಲ್ಲಿ ಪರಶುರಾಮ ಜಮ್ಮನಕಟ್ಟಿ (ಪ್ರಥಮ) ಕಾಡೇಶ್ವರ (ದ್ವಿತೀಯ) ಚೆಸ್ ಮಹಿಳೆಯರಲ್ಲಿ ಶೃತಿ ಸಿಂಗೆ (ಪ್ರಥಮ) 100 ಮೀಟರ್ ಓಟದಲ್ಲಿ ಚೇತನ ಚೋರಗಸ್ತಿ (ಪ್ರಥಮ,) 100*4 ಮಹಿಳೆಯರ ರಿಲೇಯಲ್ಲಿ (ದ್ವಿತೀಯ), ಬ್ಯಾಡ್‌ಮಿಂಟನ್ ಮಹಿಳೆಯರಲ್ಲಿ ಶಾಹೀನ ರೊಳ್ಳಿ, ರಾಜೇಶ್ವರಿ ಗಡೇದ (ದ್ವಿತೀಯ), ಬ್ಯಾಡ್‌ಮಿಂಟನ್ ಮತ್ತು ಕೇರಂ ಪುರುಷ ವಿಭಾಗದಲ್ಲಿ ಮಲ್ಲಿಕಾರ್ಜುನ ಬಾಗಲಕೋಟೆ ಮತ್ತು ಶ್ರೀಧರ ಪತ್ತಾರ (ದ್ವಿತೀಯ) ಸ್ಥಾನ ಪಡೆದುಕೊಂಡಿದ್ದಾರೆ.

ಮಹಿಳೆಯ ಥ್ರೋಬಾಲ್‌ದಲ್ಲಿ ಜಿಲ್ಲಾ ಪಂಚಾಯತ (ಪ್ರಥಮ), ಗುಂಡು ಎಸೆತದಲ್ಲಿ ವೆಂಕಟೇಶ ತಿಮ್ಮನಾಯ್ಕರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಜಾನಪದ ಗೀತೆ, ಭಾವಗೀತೆ ದಾಕ್ಷಾಯಿಣಿ ಹಿರೇಮಠ (ದ್ವಿತೀಯ) ಸ್ಥಾನ ಪಡೆದರೆ, ಚಲನಚಿತ್ರ ಗೀತೆಯಲ್ಲಿ (ಪ್ರಥಮ) ಸ್ಥಾನ ಪಡೆದು ಒಟ್ಟು 15 ಪ್ರಶಸ್ತಿಗಳನ್ನು ಪಡೆದುಕೊಂಡಿ–ದ್ದಾರೆ.

ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾದ ಶಶಿಧರ ಕುರೇರ ಸದರಿ ಅಧಿಕಾರಿ, ಸಿಬ್ಬಂದಿಗಳು ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ಮಾಡಿರುವದಕ್ಕೆ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪಕಾರ್ಯದರ್ಶಿಗಳಾದ ಎನ್. ವೈ.ಬಸರಿಗಿಡದ, ಮುಖ್ಯಲೆಕ್ಕಾಧಿಕಾರಿ ಸಿದ್ರಾಮೇಶ್ವರ ಉಕ್ಕಲಿ, ಯೋಜನಾ ನಿರ್ದೇಶಕರು ಡಿಆರ್‌ಡಿಎ ಡಾ.ಪುನೀತ್, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಸಹಾಯಕ ಕಾರ್ಯದರ್ಶಿ ಎಸ್.ಎಂ.ಕಾಂಬಳೆ, ಸಹಾಯಕ ನಿರ್ದೇಶಕರು (ಆಡಳಿತ) ವೆಂಕಟೇಶ ತಿಮ್ಮನಾಯ್ಕರ ಸೇರಿದಂತೆ ಇತರೆ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜೆಡಿಎಸ್ ಮೊದಲು ಬಿಜೆಪಿ ವಿರುದ್ಧ ಹೋರಾಡಲಿ : ಜ್ಯೋತಿ ಗೊಂಡಬಾಳ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜೆಡಿಎಸ್ ನವರು ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡುತ್ತಿರುವದು ನಿಜಕ್ಕೂ ಹಾಸ್ಯಾಸ್ಪದ, ಅವರು ಮೊದಲು ಬೆಲೆ ಏರಿಕೆಯನ್ನು ಗಗನಕ್ಕೆ ತೆಗೆದುಕೊಂಡು ಹೋಗಿರುವದಕ್ಕೆ ಬಿಜೆಪಿ ವಿರುದ್ಧ ಪ್ರತಿಭಟಿಸಲಿ ಎಂದು ಗ್ಯಾರಂಟಿ ಸಮಿತಿ ಸದಸ್ಯೆ, ಕಾಂಗ್ರೆಸ್ ಮುಖಂಡರಾದ ಜ್ಯೋತಿ ಎಂ. ಗೊಂಡಬಾಳ ಅವರು ವ್ಯಂಗ್ಯವಾಡಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಇಡೀ ದೇಶದಲ್ಲಿ ಎಲ್ಲ ವಸ್ತುಗಳ ಬೆಲೆಯನ್ನು ಲೆಕ್ಕಕ್ಕೆ ಸಿಗದಂತೆ ಏರಿಸಿ, ಜಿಎಸ್‌ಟಿ ಬರೆ ಹಾಕಿ ಸಾಮಾನ್ಯ ಜನರ ಬದುಕನ್ನು ಮೂರಾಬಟ್ಟೆ ಮಾಡಿರುವ ಕೇಂದ್ರದ ಬಿಜೆಪಿ ಎನ್‌ಡಿಎ ಸರಕಾರದ ವಿರುದ್ಧ ಜೆಡಿಎಸ್‌ನವರು ಹೋರಾಟ ಮಾಡಲಿ, ಅವರ ಜೊತೆಗೆ ಅಧಿಕಾರಕ್ಕಾಗಿ ಸೇರಿಕೊಂಡು ಜನರಿಗೆ ಮಂಕು ಬೂದಿ ಎರಚಿರುವ ಕೇಂದ್ರದ ಪರವಾಗಿ ನಿಂತ ಜೆಡಿಎಸ್‌ಗೆ ಕಾಂಗ್ರೆಸ್‌ನ ಬಸ್ ದರ ಏರಿಕೆ ಕುರಿತು ಮಾತನಾಡುವ ನೈತಿಕತೆ–ಯೇ ಇಲ್ಲ ಎಂದು ಕಿಡಿಕಾರಿದ್ದಾರೆ.

ಬಿಜೆಪಿ ಸರಕಾರ ಇದೇ ಅಶೋಕ ಅವರು ಸಾರಿಗೆ ಸಚಿವರಾಗಿ 2008 ರಿಂದ 2012 ರವರೆಗೆ ಬರೋಬ್ಬರಿ ಏಳು ಬಾರಿ ಬೆಲೆ ಏರಿಕೆ ಮಾಡಿದ್ದರು, 2008 ಮತ್ತು 2012 ರಲ್ಲಿ ಎರಡು ಬಾರಿ ಶೇ. 12 ರಷ್ಟು ದರ ಏರಿಸಿ ಒಟ್ಟು ಅವರ ಅವಧಿಯಲ್ಲಿ 47.8 ರಷ್ಟು ಬಸ್ ದರ ಹೆಚ್ಚಳ ಮಾಡಿದ್ದಾರೆ.

ಆದರೆ ಸಿದ್ದರಾಮಯ್ಯ ಡಿಕೆ ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರಕಾರ ಮಹಿಳೆಯರಿಗೆ ಉಚಿತ ಬಸ್ ಸೌಕರ್ಯ ಶಕ್ತಿಯನ್ನು ಕೊಟ್ಟಿದೆ, ಕೇಂದ್ರ ಬಿಜೆಪಿ ಡೀಸೆಲ್ ಬೆಲೆ ಏರಿಸಿದ್ದು ಮತ್ತು ಸಾರಿಗೆ ನೌಕರರ ಕುಟುಂಬದ ಆರೋಗ್ಯ ರಕ್ಷಣೆಗೆ ಹೊಸ ಯೋಜನೆ ಕೆಎಸ್‌ಆರ್‌ಟಿಸಿ ಆರೋಗ್ಯ ಯೋಜನೆ ಮೂಲಕ ನಗದು ರಹಿತ ತುರ್ತು ಚಿಕಿತ್ಸೆ ಕೊಡಿಸುವ ಯೋಜನೆ ತಂದಿದ್ದಾರೆ. ಎಲ್ಲದರ ಬೆಲೆ ಹೆಚ್ಚಳ ಆಗಿರುವದರಿಂದ ಸಹಜವಾಗಿ ಬೆಲೆ ಏರಿಕೆಯಾಗಿದೆ ಎಂಬ ಸಾಮಾನ್ಯ ಜ್ಞಾನದ ಕೊರತೆ ಇದ್ದು, ಈ ಪ್ರತಿಭಟನೆಯ ಮೂಲಕ ಜನರನ್ನು ಮೂರ್ಖರನ್ನಾಗಿಸಲು ಸಾಧ್ಯವಿಲ್ಲ ಮತ್ತು ಯಾರೂ ಏನೇ ಅಂದರೂ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಬದುಕಿಗೆ ದೊಡ್ಡ ಆಸರೆಯಾಗಿವೆ ಎಂದು ಜ್ಯೋತಿ ಗೊಂಡಬಾಳ ಹೇಳಿದ್ದಾರೆ.

ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿ:9964206170

# ಜಮಖಂಡಿಯಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.6–ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆಯವರ 194ನೇ ಜಯಂತ್ಯೋತ್ಸವವನ್ನು ಜಮಖಂಡಿಯ ಮಾಳಿ ಸಮಾಜ ಮಂದಿರದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಮಾಳಿ ಸಮಾಜದ ಅಧ್ಯಕ್ಷ ಕಾಡು ಮಾಳಿ ಹಾಗೂ ಸಮಾಜದ ಹಿರಿಯರಾದ ಗುರುಪಾದ ಮಂಡಿಗೇರಿ, ಶಿವಪ್ಪ ತಾನಪ್ಪಗೋಳ, ಸುರೇಶ ಮುಧೋಳ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಮಂಡಳದ ಅಧ್ಯಕ್ಷೆ ಪೂರ್ಣಿಮಾ ಮಾಳಿ, ಸವಿತಾ ಮಂಡಿಗೇರಿ ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪ್ರೊ.ಬಸಮ್ಮ ಬಾಗೋಜಿ, ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡುವುದರಿಂದ ಒಂದು ಮನೆ ಅಷ್ಟೇ ಅಲ್ಲದೆ ಇಡೀ ಸಮಾಜ ಮತ್ತು ದೇಶವನ್ನೇ ಸುಧಾರಣೆ ಮಾಡಬಲ್ಲರು ಎಂದರು.

ಸಾವಿತ್ರಿಬಾಯಿ ತಾವು ತಮ್ಮ ಪತಿಯಿಂದ ಶಿಕ್ಷಣ ಕಲಿತು ಇಡೀ ಸಮಾಜವನ್ನೇ ಬದಲಾಯಿಸಿದರು. ಆದ್ದರಿಂದ ಶಿಕ್ಷಣ ಪಡೆದ ಹೆಣ್ಣು ಮಕ್ಕಳು ಒಂದಲ್ಲ ಒಂದು ದಿನ ಏನನ್ನಾದರೂ ಸಾಧನೆ ಮಾಡಿಯೇ ಮಾಡುತ್ತಾರೆ ಎಂದು ಬಾಗೋಜಿ ಹೇಳಿದರು.

ಇದೇ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೆ ಮಹಿಳಾ ಮಂಡಲದ ಅಧ್ಯಕ್ಷೆ ಪೂರ್ಣಿಮಾ ಮಾಳಿ ವಿದ್ಯಾರತ್ನ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪಡೆದುಕೊಂಡಿ–ದ್ದಕ್ಕಾಗಿ ತಾಲೂಕ ನೌಕರರ ಸಂಘ, ಇನ್ನರ್ ವೀಲ್ ಸಂಸ್ಥೆ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಮಂಡಲದ ಸದಸ್ಯರೆಲ್ಲರೂ ಸನ್ಮಾನಿಸಿದರು.

ಸಾವಿತ್ರಿಬಾಯಿ ಫುಲೆ ಮಹಿಳಾ ಮಂಡಲದ ವತಿಯಿಂದ ಸುನಿತಾ ಬಳಿಗಾರ ಹಾಗೂ ಅಲ್ಕಾ ಮಾಳಗಿ ಅವರನ್ನು ಸನ್ಮಾನಿಸಲಾಯಿತು. ಮಾಲಗಾರ ನಿರೂಪಿಸಿದರು. ಮಾಳಿ ವಂದಿಸಿದರು.

# ಬಸ್ ದರ ಏರಿಕೆ ಖಂಡಿಸಿ ಎಬಿವಿಪಿ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ–ಬಸ್ ಪ್ರಯಾಣ ದರವನ್ನು ಶೇ.15 ರಷ್ಟು ಹೆಚ್ಚಳ ಮಾಡಿದ ಸರ್ಕಾರದ ನಿರ್ಧಾರವನ್ನು ಖಂಡಿಸಿ ಇಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪ್ರತಿಭಟನೆ ನಡೆಸಿತು. ನಗರದ ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಬಸ್ ಪ್ರಯಾಣ ದರವನ್ನು ಶೇ.15 ರಷ್ಟು ಹೆಚ್ಚಳ ಮಾಡುವುದರ ಮೂಲಕ ಬಡ, ಕೂಲಿ ಕಾರ್ಮಿಕರು, ಮಾಧ್ಯಮವರ್ಗದ ಜನತೆಗೆ ಹೊರೆಯನ್ನು ಹೇರಿದಂತಾಗಿದೆ. ಸರ್ಕಾರಿ ಬಸಗಳನ್ನೇ ಅವಲಂಬಿಸಿ ಸಾವಿರಾರು ಜನ ದಿನನಿತ್ಯ ತಮ್ಮ ಕೆಲಸ ಕಾರ್ಯಗಳಿಗೆ ಓಡಾಡುತ್ತಾ–ರೆ. ಆದರೆ ಬಸ್ ದರ ಹೆಚ್ಚಳ ಮಾಡುವುದರ ಮೂಲಕ ಆರ್ಥಿಕ ಹೊರೆಯನ್ನು ಜನಸಾಮಾನ್ಯರ ಮೇಲೆ ಸರ್ಕಾರ ಹಾಕುತ್ತಿದೆ ಎಂದರು. ಶಕ್ತಿ ಯೋಜನೆಯಿಂದಾಗಿ ದಿನನಿತ್ಯ ಬಸ್‌ಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಇದೆ. ಆದರೆ ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡದೆ ಶಾಲಾ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತಿದ್ದು, ವಿದ್ಯಾರ್ಥಿಗಳ ಶಾಲಾ, ಕಾಲೇಜಿಗೆ ಹೋಗುವ ಸಂದರ್ಭದಲ್ಲಿ ಹಲವಾರು ಬಸ್ಸುಗಳಲ್ಲಿ ಸ್ಥಳಾವಕಾಶ ಇಲ್ಲದೆ ಬಸ್‌ಗಳನ್ನು ನಿಲ್ಲಿಸದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಸರಿಯಾದ ಸಮಯಕ್ಕೆ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಆಗುತ್ತಿಲ್ಲ. ಸರ್ಕಾರ ಕೂಡಲೇ ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಿ ವಿದ್ಯಾರ್ಥಿಗಳ ಹಾಗೂ ಜನಸಾಮಾನ್ಯರ ಪ್ರಯಾಣಕ್ಕೆ ಅನುಕೂಲ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ನಂತರ ತಹಶೀಲ್ದಾರ ಅವರಿಗೆ ಮನವಿ ಪತ್ರ ಸಲ್ಲಿಸಿದರು. ವಿಪುಲ್ ಪೇಟ್ಕರ್, ಹನಮಂತ ಹಳ್ಳೂರ, ವೈಭವ ಹಂದ್ರಾಳ, ಅವಿನಾಶ ಹೊಕ್ರಾಣಿ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬೆಳಕೇರಾ; ಪಿಕೆಪಿಎಸ್ ಚುನಾವಣೆ ಫಲಿತಾಂಶ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ತಾಲೂಕಿನ ಬೆಳಕೇರಾ ಗ್ರಾಮದ ಪಿಕೆಪಿಎಸ್ ಆಡಳಿತ ಮಂಡಳಿಯ ಚುನಾವಣೆ ರವಿವಾರ ಬೆಳಿಗ್ಗೆ 9 ಘಂಟೆಯಿಂದ 4 ಘಂಟೆಯ ವರೆಗೆ ಮತದಾನ ನಡೆಯಿತ್ತು. ಬಳಿಕ ಸಂಜೆ ಮತ ಎಣಿಕೆ ಕಾರ್ಯ ನಂತರ ಫಲಿತಾಂಶವನ್ನು ಚುನಾವಣಾಧಿಕಾರಿ ಸುದರ್ಶನ್ ವಿಶ್ವಕರ್ಮ ಘೋಷಣೆ ಮಾಡಿದರು. ಸಾಮಾನ್ಯ ಸ್ಥಾನ:– ವಿಶ್ವನಾಥ ಮಾಣಿಕರಾವ, ಸಂಜುಕುಮಾರ್ ಕೋಟೆಪ್ಪಾ, ಬಾಬುರಾವ್ ಗೋವಿಂದರಾವ, ಸಂತೋಷ ವೀರಶೆಟ್ಟಿ, ಶಿವಕುಮಾರ್ ಈಶ್ವರ, ಮಹಿಳಾ ಸ್ಥಾನ:– ಮಲ್ಲಮ್ಮಾ ಜಗನಾಥ, ನಸಿಮಾ ಬೇಗಂ ಇಸ್ಮಾಯಿಲ್ ಸಾಬ್, ಪರಿಶಿಷ್ಟ ಜಾತಿ ಸ್ಥಾನ:– ಬಾಬುರಾವ್ ಶಿವರಾಜ್, ಪರಿಶಿಷ್ಟ ಪಂಗಡ ಸ್ಥಾನ:– ಮಾರುತಿ ತುಕರಾಮ, ಹಿಂದುಳಿದ ವರ್ಗ(ಎ) ಸ್ಥಾನ:– ಮೋದಿನಸಾಬ್ ಮಸ್ತಾನ ಸಾಬ್, ಹಿಂದುಳಿದ ವರ್ಗ(ಬಿ) ಮಡೇಪ್ಪಾ ರಾಮಣ್ಣ, ಸಾಲಗರರಲ್ಲದ ಸ್ಥಾನ:– ವೆಂಕಟರೆಡ್ಡಿ ಶಾಯಿರೆಡ್ಡಿ ಆಯ್ಕೆಯಾಗಿದ್ದರೆ ಎಂದು ಚುನಾವಣಾಧಿಕಾರಿ ಸುದರ್ಶನ್

# ವಿದ್ಯಾರ್ಥಿಗಳ ಜೊತೆ ಗೊರುಚ ಸಂವಾದ ಸಂಶೋಧನಾ ಮನೋಭಾವ ಬೆಳೆಸಿಕೊಳ್ಳಲು ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.6–ವಿದ್ಯಾರ್ಥಿಗಳು ಕಾಲಕ್ಕನುಗುಣವಾಗಿ ಬರುವ ತಂತ್ರಜ್ಞಾನವನ್ನು ಬಳಸಿಕೊಂಡು, ಮೌಖಿಕ ಪರಂಪರೆಯಿಂದ ಬಂದಿರುವ ಜಾನಪದ ಸಾಹಿತ್ಯ ಸಂಪಾದನೆ ಮಾಡುವದರೊಂದಿಗೆ ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ನಾಡೋಜ ಡಾ.ಗೊ.ರು.ಚನ್ನಬಸಪ್ಪ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ನವನಗರದ ಸರ್ಕಾರಿ ಪದವಿ ಕಾಲೇಜು ಕನ್ನಡ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿ ಮಾತನಾಡಿದರು.

ಸಂವಾದದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಶಕ್ತ ಭಾಷಾನೀತಿ ತಜ್ಞರ ಸಮಿತಿ ಸದಸ್ಯ ಡಾ.ಸಣ್ಣವೀರಣ್ಣ ದೊಡ್ಡಮನಿ ಮಾತನಾಡಿ, ಜಾನಪದ ವಿಶ್ವವಿದ್ಯಾಲಯ ಕೇವಲ ಕಡತಗಳ ವಿಶ್ವವಿದ್ಯಾಲಯ ಆಗಿದೆ. ಉತ್ತರ ಕರ್ನಾಟಕದ ಕಲಾವಿದರ ಅಭಿವ್ಯಕ್ತಿ ಮಾಧ್ಯಮವಾಗಿ ಬೆಳೆಯಲು ಸರ್ಕಾರ ಯೋಚಿಸುತ್ತಿಲ್ಲ ಎಂದರು.

ನಾಡೋಜ ಡಾ.ಗೊ.ರು. ಚನ್ನಬಸಪ್ಪನವರ ಕನಸಿನ ಕೂಸಾದ ಜಾನಪದ ವಿಶ್ವವಿದ್ಯಾಲಯದಲ್ಲಿ ಜಾನಪದದ ಹಲವು ಕಲಾ ಪ್ರಕಾರಗಳಾದ ತೊಗಲುಗೊಂಬೆಯಾಟ, ಸಂಪ್ರದಾಯದ ಹಾಡುಗಳು, ಡೊಳ್ಳಿನ ಮೇಳ, ಹೆಜ್ಜೆ ಕುಣಿತ, ವೀರಗಾಸೆ, ಕರಡಿ ಮಜಲು, ಇಂಥ ಸಮುದಾಯ ಕೇಂದ್ರತ ಆಲೋಚನೆಗಳು ಪ್ರತ್ಯೇಕ ವಿಭಾಗಗಳಾಗಿ ಮುಖ್ಯ ವಾಹಿನಿಗೆ ಬರಬೇಕು. ಯಾವುದೆ ಪದವಿ ಓದಲಾರದೆ ಕಲೆಯೇ ಉಸಿರಾಗಿಸಿಕೊಂಡಿರುವ ಕಲಾವಿದರ ಬದುಕಿನ ಕಲೆ ಅನಾವರಣ ಆಗಬೇಕು. ಮೌಖಿಕ ಬೇರುಗಳು ಜತನಗೊಳ್ಳಬೇಕು. ಜನಪದ ಕಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಜನಪದ ವಿಶ್ವವಿದ್ಯಾಲಯ ಇನ್ನಾದರೂ ಗಮನ ಹರಿಸಬೇಕು ಎಂದು ದೊಡ್ಡಮನಿ ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕೋಶಾಧ್ಯಕ್ಷ ಡಾ.ಸಿ.ಎಂ. ಜೋಶಿ, ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ, ಡಾ.ಸುಮಂಗಲಾ ಮೇಟಿ, ಡಾ.ಸಂತೋಷ ಕಾಳನ್ನವರ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ರಾಜಣ್ಣ ಬಿ.ಹುಡಗಿಕರ ಅವರಿಗೆ ಪ್ರಶಸ್ತಿ

**ಹುಮನಾಬಾದ್ ತಾಲೂಕಿನ ಹಣಕುಣಿ ಗ್ರಾಮದ ಶ್ರೀ ರಾಜಣ್ಣ ಭೀಮಣ್ಣ ಹುಡುಗಿಕರ ಅವರನ್ನು 2024, ಹೆಚ್.ನರಸಿಂಹಯ್ಯ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸರಿ. ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ......**

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶದಂತೆ ರಾಜಣ್ಣನವರು ಯಾವುದೇ ಫಲಾಪೇಕ್ಷೆ ಇಲ್ಲದೆ ತಮ್ಮ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಅವರು ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯ.

**ಎಂಟೆದೆಯ ಭಂಟ ಬಿದ್ದವರ ನೆಂಟ** ಎಂಬಂತೆ ಬಡವರು, ಅಸಾಯಕರ ಪಾಲಿನ ಪಕ್ಷದವರು. ಮಕ್ಕಳ ಶೈಕ್ಷಣಿಕ ಸಹಾನುಭೂತಿ, ನಿರ್ಗತಿಕರಿಗೆ ಅವರದ್ದು ಸಹಾಯ ಅಭಯ ಹಸ್ತ. ಸಮಾಜದಲ್ಲಿ ಕೊಂಡಿಯಾಗಿ ಮಾರ್ಗದರ್ಶಕರಾಗಿ ಎಲ್ಲರಿಗೂ ನ್ಯಾಯ, ನೀತಿಯನ್ನು ಭೋದಿಸಿದವರು. ಊರಿನ ಜನರು ಅಷ್ಟೇ ಅಲ್ಲ, ಸುತ್ತ ಮುತ್ತಲಿನ ಹಳ್ಳಿಗಳಲ್ಲಿಯ ಜನರು ಕೂಡಾ ರಾಜಣ್ಣ ಅವರಲ್ಲಿ ಅಪಾರ ಭಕ್ತಿ, ಗೌರವ, ಪ್ರೀತಿ ಮತ್ತು ವಿಶ್ವಾಸವನ್ನು ಇಟ್ಟಿರುತ್ತಾರೆ. ವಾದ ವಿವಾದದಲ್ಲಿ ರಾಜಣ್ಣನವರು ನ್ಯಾಯ, ನೀತಿ ಮತ್ತು ಸತ್ಯದ ಪರವಾಗಿ ನಿಂತವರು. ಅನ್ಯಾಯ, ಅನೀತಿ, ಅಸತ್ಯವನ್ನು ಎಂದೂ ಸಹಿಸಿದವರಲ್ಲ. ಅನ್ಯಾಯ, ಅನೀತಿ ಮತ್ತು ಅಸತ್ಯ ಮಾರ್ಗ ತುಳಿದವರನ್ನು ಬಗ್ಗುಬಡಿಯಲು ಹಿಂಜರಿದವರಲ್ಲ. ವಾದ ವಿವಾದದಲ್ಲಿ ರಾಜಣ್ಣನವರ ತೀರ್ಮಾನವೇ ಅಂತಿಮ.

ಸಹಶಿಕ್ಷಕರಾಗಿ , ಮುಖ್ಯ ಗುರುಗಳಾಗಿ ವಿವಿಧ ಹುದ್ದೆಗಳಲ್ಲಿ ಮೂರು ದಶಕಗಳ ಅಧಿಕ ಅವಧಿ ಸೇವೆಯಲ್ಲಿ ಪ್ರಾಮಾಣಿಕತನ, ಶಿಸ್ತು ಮತ್ತು ನಿಷ್ಠೆಯನ್ನು ಪಾಲಿಸಿಕೊಂಡು ಬಂದವರು. ಸೇವಾ ನಿವೃತ್ತಿ ನಂತರ ತಾಲೂಕಾ ಮಟ್ಟದ ನಿವೃತ್ತ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅಲ್ಲಿಯೂ ಕೂಡ ಅವರು ಎಲ್ಲರ ಪ್ರೀತಿ ವಿಶ್ವಾಸ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ.

ವೇ.ಮೂ.ವೀರಂತಯ್ಯ ಸ್ವಾಮಿ ಕಲ್ಮಠ ಚಿಟಗುಪ್ಪ ಅವರನ್ನು ತಮ್ಮ ಮನೆ ಗುರುಗಳೆಂದು ಭಾವಿಸಿ ನಡೆದುಕೊಂಡು ಬಂದಿರುತ್ತಾರೆ. ಕಲ್ಮಠ ಹಾಗೂ ಹುಡುಗಿಕರ ಮನೆತನ ಒಂದೇ ಕುಟುಂಬದಂತೆ ಅನುನ್ಯವಾಗಿ ಬೆಳೆದುಕೊಂಡು ಬರುವಲ್ಲಿ ರಾಜಣ್ಣನವರ ನಡತೆಯಿಂದ ಬೆಸೆದುಕೊಂಡಿವೆ.

ಶಿವಸಿದ್ಧಯೋಗಾಶ್ರಮ ಸು–




**ರಾಜಣ್ಣ ಬಿ.ಹುಡಗಿಕರ್‌ರವರು,** ಬಡ ಮನೆತನದಲ್ಲಿ ಹುಟ್ಟಿ ಬೆಳೆದು ಕಷ್ಟ ಪಟ್ಟು ಓದಿ ಮುಂದೆ ಬಂದಿದ್ದಾರೆ. ದುಡಿದು ಗಳಿಸಿ ಮನೆತನವನ್ನು ಆರ್ಥಿಕವಾಗಿ ಮುಂದೆ ತಂದಿದ್ದಾರೆ. ಇತರರು ತಮ್ಮ ಹಾಗೆ ದುಡಿದು ಮುಂದೆ ಬರುವಂತೆ ಪ್ರೇರಣೆ ನೀಡಿದ್ದಾರೆ.
**–ಪ್ರೊ.ಸಂಗಯ್ಯ ವಿ.ಕಲ್ಮಠ**

ಕ್ಷೇತ್ರ ಇಟಗಿ ಪೀಠಾಧಿಪತಿ ಲಿಂ. ಪೂಜ್ಯ ಶ್ರೀ ಚನ್ನಮಲ್ಲೇಶ್ವರ ತ್ಯಾಗಿ ಅವರ ಸೇವೆಗೈದು ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾದವರು.

ಧರ್ಮರತ್ನ, ಶಿವಾಚಾರ್ಯರತ್ನ, ಸದ್ಧರ್ಮ ಶಿಖಾಮಣಿ, ಕರ್ನಾಟಕ ಸಾಂಸ್ಕೃತಿಕ ರತ್ನ, ಷ.ಬ್ರ.ಡಾ.ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾಧಿಪತಿಗಳು ಸುಕ್ಷೇತ್ರ ಹಾರಕೂಡ ಇವರ ಪರಮ ಶಿಷ್ಯರಲ್ಲಿ ರಾಜಣ್ಣ ಹುಡಗಿಕರ ಒಬ್ಬರು.

ಆ ಪೀಠದ ಪೂರ್ವ ಗುರುಗಳ ಪಾದುಕೆಗಳು ಇವರ ಮನೆಯಲ್ಲಿ ಇಟ್ಟಿರುವುದು ಇವರಿಗೆ ಇರುವ ಶ್ರೀರಕ್ಷೆ.

ಇತ್ತೀಚೆಗೆ ಹಣಕುಣಿ ಗ್ರಾಮದ ಜನರ ಅಪೇಕ್ಷೆಯಂತೆ ಗ್ರಾಮ ದೇವತೆ ಶ್ರೀ ಲಕ್ಷ್ಮಿ ಗುಡಿ ನಿರ್ಮಾಣ ಹಾಗು ಮೂರ್ತಿ ಸ್ಥಾಪನೆಯಲ್ಲಿ ಶ್ರೀ ರಾಜಣ್ಣನವರು ಸಲ್ಲಿಸಿದ ಸೇವೆ ಅಪಾರ.

ಬಡ ಮನೆತನದಲ್ಲಿ ಹುಟ್ಟಿ ಬೆಳೆದು ಕಷ್ಟ ಪಟ್ಟು ಓದಿ ಮುಂದೆ ಬಂದಿದ್ದಾರೆ. ದುಡಿದು ಗಳಿಸಿ ಮನೆತನವನ್ನು ಆರ್ಥಿಕವಾಗಿ ಮುಂದೆ ತಂದಿದ್ದಾರೆ. ಇತರರು ತಮ್ಮ ಹಾಗೆ ದುಡಿದು ಮುಂದೆ ಬೀರುವಂತೆ ಪ್ರೇರಣೆ ನೀಡಿರುತ್ತಾರೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಮೂಲಕ ಹಿರಿಯರ ಕರ್ತವ್ಯ ಪೂರೈಸಿರುತ್ತಾರೆ. ಮಕ್ಕಳು ಸ್ವಂತ ಬಲದ ಮೇಲೆ ನಿಲ್ಲುವಂತೆ ಅವರಲ್ಲಿ ಧೈರ್ಯ ಸಾಹಸ ತುಂಬಿರುತ್ತಾರೆ.

ಬಡ ಹಾಗೂ ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ನೀಡುವ ನಿಟ್ಟಿನಲ್ಲಿ ಒಂದು ರಬೀಂದ್ರನಾಥ ಟ್ಯಾಂಗೊರ ವಿದ್ಯಾ ಸಂಸ್ಥೆಯನ್ನು ಕಟ್ಟಿ ಬೆಳೆಸಿರುತ್ತಾರೆ. ಮೂಡನಂಬಿಕೆಯಿಂದ ಮಕ್ಕಳು ದೂರ ಇರಬೇಕು ಎಂದು ನುಡಿಯುತ್ತಾರೆ.

ರಾಜಣ್ಣನವರ ವ್ಯಕ್ತಿತ್ವ ವಿಶಿಷ್ಟವಾದದ್ದು. ಮಾತಿನಲ್ಲಿ ನಯ ವಿನಯ, ಅವರ ನುಡಿ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ ಸ್ಫಟಿಕದ ಸಲಾಕೆಯಂತೆ. ತುಂಬಾ ಸ್ವಾರಸ್ಯಕರವಾದ ಮಾತು, ವಿನೋದ, ಹಾಸ್ಯ ಚಟಾಕೆಗಳಿಂದ ಕೇಳುಗರ ಮನಸೂರೆಗೊಳ್ಳುವುದು.

ಸಚ್ಚಾರಿತ್ರ್ಯತೆ, ಸಾಮಾಜಿಕ ಚಿಂತನೆ ದೇಶ ಭಕ್ತಿ, ವಿಷಯ ವಿರಕ್ತಿ, ಶಿಕ್ಷಣದಲ್ಲಿ ಆಸಕ್ತಿ ಇವು ರಾಜಣ್ಣ ಹುಡಗಿಕರ ಅವರಲ್ಲಿರುವ ವಿಶೇಷ ಗುಣಗಳು. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇರುವಂತೆ ಕೃಷಿಯಲ್ಲಿಯೂ ವಿಶೇಷ ಆಸಕ್ತಿ. ಈ ಇಳಿವಯಸ್ಸಿನಲ್ಲೂ ಹೊಲಗದ್ದೆಗಳೊಂದಿಗೆ ಇರುವ ಸ್ನೇಹ ಕಳೆದುಕೊಂಡವರಲ್ಲ. ಉತ್ತಮ ಆರೋಗ್ಯಕ್ಕೆ ಇದು ಅವಶ್ಯಕ ಎನ್ನುತ್ತಾರೆ. ಹೃದಯಘಾತದಿಂದ ಚೇತರಿಸಿಕೊಂಡಿರುವುದಕ್ಕೆ ಕೃಷಿಯೊಂದಿಗೆ ಸ್ನೇಹ, ಸತ್ಸಂಗ, ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಗಳು ಫಲಕಾರಿಯಾಗಿವೆ ಎನ್ನುತ್ತಾರೆ.

ಗುರುಹಿರಿಯರು ಮತ್ತು ತಾಯಿ ತಂದೆಯವರಲ್ಲಿ ಅಪಾರ ಭಕ್ತಿ. ಅವರು ಮಾಡಿದ ತಾಯಿ ತಂದೆ ಸೇವೆ ಮುಂದೆ ಅವರ ಮಕ್ಕಳಿಗೆ ಅನಕರಣೀಯ. ಗುರುಹಿರಿಯರು ಮತ್ತು ತಾಯಿ ತಂದೆಯವರ ಸೇವ ಸಂದೇಶವನ್ನು ಇಂದಿನ ಯುವ ಪೀಳಿಗೆಗೆ ನೀಡಿರುತ್ತಾರೆ. ಯುವ ಪೀಳಿಗೆ ಗುರುಹಿರಿಯರ ತಾಯಿ ತಂದೆಯವರ ಸೇವೆ ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದು ಪ್ರೊ.ಸಂಗಯ್ಯ ವಿ.ಕಲ್ಮಠ ಕರೆ ನೀಡಿದ್ದಾರೆ.

# ಇಬ್ರಾಹಿಂಸಾಬ ಬಿಸನಳ್ಳಿ ಭಾಗ್ಯನಗರ ಪಟ್ಟಣ ಪಂಚಾಯತ ಸದಸ್ಯರಾಗಿ ನಾಮ ನಿರ್ದೇಶನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಭಾಗ್ಯನಗರದ ಹಿರಿಯ ವಕೀಲರು ಹಾಗೂ ಜಾಮಿಯಾ ಮಜೀದ್ ಕಮಿಟಿ ಯ ಅಧ್ಯಕ್ಷರಾದ ಇಬ್ರಾಹಿಂ ಸಾಬ್ ಬಿಸನಳ್ಳಿ ಸೇರಿದಂತೆ ಮೂವರನ್ನು ಭಾಗ್ಯನಗರ ಪಟ್ಟಣ ಪಂಚಾಯತ್ ನಾಮನಿರ್ದೇಶನ ಸದಸ್ಯರನ್ನಾಗಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಪುರಸಭೆ ಕಾಯ್ದೆ–1964ರ ಪ್ರಕರಣ 352(1)(ಬಿ)ರಡಿಯಲ್ಲಿ ಮುಂದಿನ ಆದೇಶದವರೆಗೆ ಕೊಪ್ಪಳ ಜಿಲ್ಲೆಯ ಭಾಗ್ಯನಗರ ಪಟ್ಟಣ ಪಂಚಾಯತಿಗೆ ಸದಸ್ಯರನ್ನಾಗಿ ಇಬ್ರಾಹಿಂಸಾಬ ರಾಜಾಸಾಬ ಬಿಸನಳ್ಳಿ. ಹನುಮಂತಪ್ಪ ಪರಮೇಶ್ವರಪ್ಪ ಬಂಡಿ, ಶ್ರೀಮತಿ ಸವಿತಾ ಅಶೋಕ ಗೋರಂಟ್ಲಿ ಯವರನ್ನು ನಾಮ ನಿರ್ದೇಶನ ಮಾಡಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಭಾಗ್ಯನಗರ ಪಟ್ಟಣ ಪಂಚಾಯತಗೆ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿದ್ದಕ್ಕಾಗಿ ಶಾಸಕರಾದ ರಾಘವೇಂದ್ರ ಹಿಟ್ನಾಳ್ ಸಂಸದರಾದ ರಾಜಶೇಖರ ಹಿಟ್ನಾಳ್ ಹಾಗೂ ಕಾಂಗ್ರೆಸ್ ಮುಖಂಡರಿಗೆ ಇಬ್ರಾಹಿಂ ಸಾಬ್ ಬಿಸನಳ್ಳಿ ಧನ್ಯವಾದ ಅರ್ಪಿಸಿದ್ದಾರೆ.

# ಹಾವಗಿಲಿಂಗೇಶ್ವರ ಶ್ರೀಗೆ ನಿತ್ಯ ತುಲಾಭಾರ




ಮಲ್ಲಮ ನುಡಿ ವಾರ್ತೆ ಬೀದರ.ಜ. 06 : ಭಾಲ್ಕಿ ತಾಲ್ಲೂಕಿನಹಲಬರ್ಗಾ ಗ್ರಾಮದ ಹಾವಗಿಲಿಂಗೇಶ್ವರ ಸಂಸ್ಥಾನ ಮಠದಲ್ಲಿ ದ್ವಾದಶ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರಿಗೆ ನಿತ್ಯ ಒಬ್ಬರು ಭಕ್ತರಿಂದ ತುಲಾಭಾರ ಸೇವೆ ನೆರವೇರುತ್ತಿದೆ.

ಆರು ದಿನಗಳಲ್ಲಿ ಆರು ಭಕ್ತರು ಶ್ರೀಗಳಿಗೆ ನಾಣ್ಯಗಳಿಂದ ತುಲಾಭಾರ ಮಾಡಿ ಭಕ್ತಿ ಸಮರ್ಪಿಸಿದ್ದಾರೆ. ನಂದಿನಿ ಸಂತೋಷ, ಆಕಾಶ ರಿಕ್ಕೆ, ರವೀಂದ್ರ ಶಾಸ್ತ್ರಿ, ಸಂತೋಷ ಕಾನಸ್ಟೆಬಲ್, ಶಿವರಾಜ ಹಂಪಾ ಹಾಗೂ ಉಷಾ ವಸಂತ ವಕೀಲ್ ಅವರು ತುಲಾಭಾರ ಸೇವೆಗೈದ ಭಕ್ತರು.

ಜಾತ್ರೆ ಜ.11ಕ್ಕೆ ಕೊನೆಗೊಳ್ಳಲಿದ್ದು, ಅಲ್ಲಿಯವರೆಗೂ ನಿತ್ಯ ತುಲಾಭಾರ ಸೇವೆ ಜರುಗಲಿದೆ.

ದ್ವಾದಶ ಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ಭಕ್ತರು ಸ್ವಯಂ ಪ್ರೇರಣೆಯಿಂದ ಅದ್ದೂರಿ ಸಮಾರಂಭ, ತುಲಾಭಾರ ಸೇವೆ, ಸತ್ಕಾರ, ದಾಸೋಹದ ಮೂಲಕ ಭಕ್ತಿ ಸಮರ್ಪಣೆ ಮಾಡಿರುವುದು ಸಂತಸ ಉಂಟು ಮಾಡಿದೆ. ಸಮಾಜೋಧಾರ್ಮಿಕ ಕಾರ್ಯಗಳಲ್ಲಿ ಮತ್ತಷ್ಟು ಉತ್ಸಾಹದಿಂದ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದೆ ಎಂದು ಹಾವಗಿಲಿಂಗೇಶ್ವರ ಶ್ರೀ ತಿಳಿಸಿದರು.

# ಚಿದ್ರಿಯಲ್ಲಿ ರಸ್ತೆಭೂಮಿ ಒತ್ತುವರಿ ಮತ್ತು ಮಾರಾಟ: ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ: ಈಶ್ವರಸಿಂಗ್ ಠಾಕೂರ್



ಬೀದರ.ಜ.06: ತಾಲೂಕಿನ ಚಿದ್ರಿ ಗ್ರಾಮದ ಸರ್ವೆ ನಂ. 181, 186, 188 ಸೇರಿದಂತೆ ಹಲವು ಜಮೀನುಗಳಿಗೆ ಹೋಗುವ ರಸ್ತೆಯನ್ನು ಕಬ್ಜಾ ಮಾಡಿ ಮಾರಾಟ ಮಾಡುತ್ತಿರುವ ನವೀದ್ ಶೇರಿಕಾರ ಹಾಗೂ ಇಸಾಕ್ ಶೇರಿಕಾರ್ ಎಂಬುವವರ ಮೇಲೆ ಜಿಲ್ಲಾಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಎರಡು ದಿನಗಳೊಳಗಾಗಿ ಒತ್ತುವರಿ ಮಾಡಿರುವ ರಸ್ತೆ ಖಾಲಿ ಮಾಡದಿದ್ದರೆ ಪ್ರತಿಭಟನೆ ಮಾಡಲಾಗುವುದೆಂದು ಭಾರತೀಯ ಜನತಾ ಪಕ್ಷದ ಬೀದರ ಉತ್ತರ ಕ್ಷೇತ್ರದ ನಾಯಕ ಈಶ್ವರ ಸಿಂಗ್ ಠಾಕೂರ್ ತಿಳಿಸಿದರು.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಗ್ರಾಮಸ್ಥರ ಹಿತದೃಷ್ಟಿಯಿಂದ ಮನವಿ ಸಲ್ಲಿಸಿರುವ ಅವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ. ಚಿದ್ರಿ ಗ್ರಾಮದ ಹಲವಾರು ಸರ್ವೆ ನಂ ಜಮೀನಿನ ಮಾಲಿಕರು ತಮ್ಮ ಜಮೀನುಗಳಿಗೆ ಹೋಗಿ ಕೃಷಿ ಚಟುವಟಿಕೆ ಮಾಡಿಕೊಂಡು ಬರುವ ರಸ್ತೆಯನ್ನೇ ನವೀದ್ ಶೇರಿಕಾರ ಮತ್ತು ಇಸಾಕ್ ಶೇರಿಕಾರ ಒತ್ತುವರಿ ಮಾಡಿಕೊಂಡು ಮಾರಾಟ ಮಾಡಿಕೊಳ್ಳುತಿದ್ದಾರೆ. ಎರಡು ದಿನಗಳ ಒಳಗಾಗಿ ಇವರ ವಿರುದ್ಧ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಜಮೀನು ಖಾಲಿ ಮಾಡಿಸಿ ರೈತರಿಗೆ ಹೋಗಿ ಬರಲು ದಾರಿ ವ್ಯವಸ್ಥೆ ಮಾಡಿಕೊಡಬೇಕು. ಈಗಾಗಲೇ 2017 ಮತ್ತು 2019 ರಲ್ಲಿ ಹಿಂದಿನ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. 2020ರಲ್ಲಿ ಪೌರಾಯುಕ್ತರಿಗೂ ಮನವಿ ನೀಡಲಾಗಿದೆಯಾದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಭೂಮಾಪಕರಿಗೆ ಕರೆಸಿ ಅಳತೆ ಮಾಡಿಸಿದಾಗ ರಸ್ತೆ ಒತ್ತುವರಿಯಾಗಿದೆ. ಇಲ್ಲಿ ರಸ್ತೆ ಬಿಡಬೇಕೆಂದು ಹೇಳಿದ್ದಾರೆ. ಹೀಗಾಗಿ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಎರಡು ದಿನಗಳ ಒಳಗಾಗಿ ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ಬೀದರ ಮನ್ನಾಎಖೆಳ್ಳಿ ರಸ್ತೆ ತಡೆದು ಹೋರಾಟ ಮಾಡಲಾಗುವುದೆಂದು ಠಾ-ಕೂರ್ ತಿಳಿಸಿದ್ದಾರೆ.

ಇದೇ ವೇಳೆ ಮುಖಂಡರರಾದ ಸ್ವಾಮಿದಾಸ ಕೆಂಪೆನೋರ್, ಶಿವರಾಜ ನೆಲವಾಳಕರ್, ವೆಂಕಟೇಶ ಶಾಲಿ ಚಿದ್ರಿ, ರಮೇಶ್ ಮಾಶೆಟ್ಟಿ, ವೀರಶೆಟ್ಟಿ ಮಾಶೆಟ್ಟಿ, ಮಲ್ಲಪ್ಪ, ಆನಂದರೆಡ್ಡಿ, ನರಸಾರೆಡ್ಡಿ, ಹಣಮಂತ, ನದೀಮ್ ಸೇರಿದಂತೆ ಇನ್ನಿತರ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಬ್ಯಾಸ್ಕೆಟ್‌ಬಾಲ್ ಟ್ರೋಫಿ ಗೆದ್ದುಕೊಂಡ ಕಲಬುರಗಿ ತಂಡ

ಮಲ್ಲಮ ನುಡಿ ವಾರ್ತೆ ಬೀದರ:ಜ.6: ಇಲ್ಲಿಯ ನೆಹರೂ ಕ್ರೀಡಾಂಗಣದಲ್ಲಿ ನಡೆದ ಕಲಬುರಗಿ ವಿಭಾಗಮಟ್ಟದ ಮುಕ್ತ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಕಲಬುರಗಿ ತಂಡ ಟ್ರೋಫಿ ಗೆದ್ದುಕೊಂಡಿದೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಕಲಬುರಗಿ ತಂಡವು ಬಳ್ಳಾರಿ ತಂಡವನ್ನು 46–34 ರಲ್ಲಿ ಸೋಲಿಸಿ ಟ್ರೋಫಿ ಗೆದ್ದುಕೊಂಡಿತು. ಬಳ್ಳಾರಿ ತಂಡ ರನ್ನರ್ ಅಪ್‌ಗೆ ತೃಪ್ತಿ ಪಟ್ಟು-ಕೊಂಡಿತು.

ವಿಜೇತ ತಂಡ ರೂ.15 ಸಾವಿರ ನಗದು ಮತ್ತು ಟ್ರೋಫಿ ಹಾಗೂ ರನ್ನರ್ ಅಪ್ ತಂಡ ರೂ. 10 ಸಾವಿರ ನಗದು ಹಾಗೂ ಟ್ರೋಫಿಗೆ ಭಾಜನವಾಯಿತು. ಮಹೇಶ ಬಳ್ಳಾರಿ ರೂ. 5 ಸಾವಿರ ನಗದಿನೊಂದಿಗೆ



ಶ್ರೇಷ್ಠ ಆಟಗಾರ ಹಾಗೂ ಸಂದೀಪ್ ಕಲಬುರಗಿ ರೂ. 1 ಸಾವಿರ ನಗದಿನೊಂದಿಗೆ ಉದಯೋನ್ಮುಖ ಆಟಗಾರ ಪ್ರಶಸ್ತಿಗೆ ಪಾತ್ರರಾದರು.

ರಾಷ್ಟ್ರೀಯ ಬಸವ ದಳದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ ವಿಜೇತ ತಂಡಗಳಿಗೆ ಟ್ರೋಫಿ ಪ್ರದಾನ ಮಾಡಿದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಡಾ. ನಾಗರಾಜ ಅವರು, ಟೂರ್ನಮೆಂಟ್ ಅನ್ನು ಮಾದರಿಯಾಗಿ ಸಂಘಟಿಸಲಾಗಿದೆ. ಆಟಗಾರರೂ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ಸಂತೋಷ ತಾಳಂಪಳ್ಳಿ ಮಾತನಾಡಿ, ಟೂರ್ನಿ ಆಯೋಜನೆ ಅವಕಾಶ ದೊರೆತದ್ದು ಸಂತಸ ಉಂಟು ಮಾಡಿದೆ. ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಬರುವ ದಿನಗಳಲ್ಲೂ ಟೂರ್ನಿಗಳನ್ನು ಆಯೋಜಿಸುವ ಉದ್ದೇಶ ಇದೆ ಎಂದು ಹೇಳಿದರು.

ರಾಜ್ಯ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಜಂಟಿ ಕಾರ್ಯದರ್ಶಿ ವಿಜಯ್ ಎಸ್. ಬಳ್ಳಾರಿ ಮಾತನಾಡಿದರು. ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಶಿವಕುಮಾರ, ನಿರ್ದೇಶಕರಾದ ಮಂಗಲಾ ಭಾಗವತ್, ಗೀತಾ ಗಡ್ಡಿ ಮತ್ತಿತರರು ಇದ್ದರು.

ಟೂರ್ನಿಯಲ್ಲಿ ಕಲಬುರಗಿಯ ಮೂರು, ಬೀದರ್ ಹಾಗೂ ಬಳ್ಳಾರಿಯ ತಲಾ ಎರಡು ತಂಡಗಳು ಸೇರಿ ಒಟ್ಟು ಏಳು ತಂಡಗಳು ಭಾಗವಹಿಸಿದ್ದವು.

ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಹಾಗೂ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ವತಿಯಿಂದ ಟೂರ್ನಿ ಹಮ್ಮಿಕೊಳ್ಳಲಾಗಿತ್ತು.

# ಶಾಸಕ ಪ್ರಭು ಚವ್ಹಾಣ ಗ್ರಾಮ ಸಂಚಾರ:ಅಸ್ವಚ್ಛತೆ ಬಗ್ಗೆ ಅಸಮಾಧಾನ

ಮಲ್ಲಮ್ಮ ನುಡಿ ವಾರ್ತೆ (ಪರಮೇಶ ರಾಂಪುರೆ) ಕಮಲನಗರ:ಜ.6: ಅಧಿಕಾರಿಗಳ ದಂಡು ಪಡೆದು ಕೊಂಡು ಹಳ್ಳಿ ಹಳ್ಳಿಗಳಿಗೆ ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ಸೋಮವಾರ ಕಮಲನಗರ ತಾಲೂಕಿನ ವಿವಿಧೆಡೆ ಗ್ರಾಮ ಸಂಚಾರ ನಡೆಸಿ, ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರಲ್ಲದೇ ಶಾಲೆ, ಅಂಗನವಾಡಿ ಕೇಂದ್ರ ಹಾಗೂ ಮತ್ತಿತರೆ ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿ ವ್ಯವಸ್ಥೆಯನ್ನು ಪರಿಶೀಲನೆ ಮಾಡಿದರು. ಚುಂಬಲೇವಾಡಿ, ರಂಡ್ಯಾಳ, ಖತಗಾಂವ, ಮದನೂರ, ಕಮಲನಗರ, ಮುರುಗ್(ಕೆ), ಬಾಳೂರ ಹಾಗೂ ಚಾಂಡೇಶ್ವರ ಶಾಲೆಗಳಲ್ಲಿ 14 ಲಕ್ಷ ಮೊತ್ತದ ಶಾಲೆ ಉನ್ನತೀಕರಣ, ದುರಸ್ತಿ, ಕುಡಿಯುವ ನೀರು, ಓಹೆಚ್‌ಟಿ ಟ್ಯಾಂಕ್, ಸೋಲಾರ್ ಪೆನಲ್ ಅಳವಡಿಕೆ ಕಾಮಗಾರಿಗಳು, ಹಕ್ಯಾಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 50 ಲಕ್ಷದ ನೂತನ ತರಗತಿ ಕೋಣೆಗಳು, ಕಮಲನಗರದಲ್ಲಿ 25 ಲಕ್ಷದ ಶೌಚಾಲಯ, 22.50 ಲಕ್ಷದ ಅಂಗನವಾಡಿ ಕೇಂದ್ರ, ಮುರುಗ್(ಕೆ)ನಲ್ಲಿ



4.99 ಲಕ್ಷದ ಸಮುದಾಯ ಭವನ ಸೇರಿದಂತೆ ಸುಮಾರು 2.56 ಕೋಟಿಗೂ ಹೆಚ್ಚು ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಶಾಲೆಗಳಿಗೆ ತೆರಳಿ, ಶಿಕ್ಷಕರು ಮತ್ತು ಮಕ್ಕಳ ಹಾಜರಾತಿಯನ್ನು ವೀಕ್ಷಿಸಿದರು. ಮಕ್ಕಳಿಗೆ ಓದಲು ತಿಳಿಸಿ, ಶಾಲೆಯಲ್ಲಿ ಪಠ್ಯ ಚಟುವಟಿಕೆಗಳು ಹೇಗೆ ನಡೆಯುತ್ತಿವೆ ಎನ್ನುವುದನ್ನು ತಿಳಿದುಕೊಂಡರು. ಕೆಲವು ಮಕ್ಕಳು ಓದಲು ಸಂಕಷ್ಟಪಡುವುದನ್ನು ಕಂಡು ಶಿಕ್ಷಕರ ವಿರುದ್ಧ ಅಸಮಧಾನಗೊಂಡರು. ಪ್ರೌಢ ಶಾಲೆಯ ವಿದ್ಯಾರ್ಥಿಗಳಲ್ಲಿ ಕನಿಷ್ಠ ಓದುವ ಜ್ಞಾನ ಇಲ್ಲದಿದ್ದರೆ ತಾವು ಏನು ಕೆಲಸ ಮಾಡುತ್ತಿದ್ದೀರೆಂದು ತರಾಟೆಗೆ ತೆಗೆದುಕೊಂಡರು.

ಕಮಲನಗರ ಪಟ್ಟಣದ ನಾಗೋಬಾ ಮಂದಿರದಲ್ಲಿ ಸೇರಿದ ಸಭೆಯಲ್ಲಿ ಮಾತನಾಡಿ, ನಾನು ಕಮಲನಗರದಲ್ಲಿ ಸಂಚಾರ ಮಾಡಿದಾಗ ಹಲವು ಕಡೆ ಅಸ್ವಚ್ಛ ಕಾಣುತ್ತಿದೆ, ನಾಲೆಗಳು ಸ್ವಚ್ಛ ಮಾಡದೆ ಗಬ್ಬು ನರುತ್ತಿರುವುದಕ್ಕೆ ಪಿ.ಡಿ.ಓ ಅವರಿಗೆ ತರಾಟೆಗೆ ತೆಗೆದುಕೊಂಡರು, ಸ್ವಚ್ಛ ವಾಹಿನಿ ಒಂದೆ ಇದೆ ಅದ್ದಕಾಗಿ ಈ ರೀತಿ ಯಾಗಿದೆ ಮುಂಬರು ದಿನಗಳಲ್ಲಿ ಗ್ರಾಮ ಸ್ವಚ್ಛತೆ ಮಾಡುತ್ತೇನೆ ಎಂದು ಹೇಳಿದರು. ದಲ್ಲಾಳಿಗಳಿಗೆ ಕಡಿವಾಣ ಹಾಕಿ: ನಾಡ ಕಛೇರಿ ಸೇರಿದಂತೆ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಹಣ ಕೊಡದೇ ಕೆಲಸವಾಗುತ್ತಿಲ್ಲವೆಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿವೆ. ಗ್ರಾಮ ಸಂಚಾರದ ವೇಳೆ ಬಹಳಷ್ಟು ಗ್ರಾಮಗಳಲ್ಲಿ ಈ ಬಗ್ಗೆ ದೂರುಗಳನ್ನು ನೀಡಿದ್ದಾರೆ. ಪಹಣಿ ತಿದ್ದುಪಡಿ ಹಾಗೂ ಮತ್ತಿತರೆ ಜಮೀನು ಸಂಬಂಧಿತ ಕೆಲಸಗಳಿಗೆ 50 ಸಾವಿರದಿಂದ ಒಂದು ಲಕ್ಷದ ವರೆಗೆ ಹಣ ಕೇಳುತ್ತಿದ್ದಾರೆಂಬ ದೂರುಗಳಿವೆ. ಔರಾದ(ಬಿ) ತಾಲ್ಲೂಕಿನ ನಾಗನಪಲ್ಲಿ, ಚಿಂತಾಕಿ ಸೇರಿದಂತೆ ಅನೇಕ ಕಡೆಗಳಲ್ಲಿ ಸಾರ್ವಜನಿಕರು ಬೇಸರ ಹೊರಹಾಕಿದ್ದಾರೆ. ತಹಸೀಲ್ದಾರರು ಇಂತಹ ಅವ್ಯವಹಾರಳಿಗೆ ಕಡಿವಾಣ ಹಾಕಬೇಕೆಂದು ನಿರ್ದೇಶನ ನೀಡಿದರು. ಜಾತಿ, ಆದಾಯ ಪ್ರಮಾಣ ಪತ್ರ ಹೀಗೆ ಸಣ್ಣ-ಪುಟ್ಟ ಕೆಲಸಗಳಿಗೂ ಹಣ ವಸೂಲಿ ಮಾಡಲಾಗುತಿದೆ. ದುಡ್ಡು ಕೊಟ್ಟರೆ ಮಾತ್ರ ಕೆಲಸವಾಗುತ್ತಿದ್ದು, ಇಲ್ಲವಾದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ಬಡಜನತೆ ಏನು ಮಾಡುವುದೆಂದು ಜನ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಇಂತವರನ್ನು ಗುರುತಿಸಿ ಮುಲಾಜಿಲ್ಲದೇ ಅಮಾನತುಗೊಳಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಅಮಿತಕುಮಾರ ಕುಲಕರ್ಣಿ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ, ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ವಸಂತ ಬಿರಾದಾರ, ಕಿರಣ ಪಾಟೀಲ, ಬಸವರಾಜ ಪಾಟೀಲ, ಶಿವು ಝುಲ್ಪೆ, ಶಿವು ವಡ್ಡೆ, ರಂಗರಾವ ಜಾಧವ, ಗಿರೀಶ ವಡೆಯರ್, ಮಂಜು ಸ್ವಾಮಿ ರಂಗಾರಾವ ಜಾಧವ, ಬಂಟಿ ರಾಂಪುರೆ, ಡಾ. ಗಾಯತ್ರಿ, ರೇಣುಕಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಶಾಂತಿಯುತ ಬೀದರ್ ಬಂದ್ ಗೆ ಸರ್ವ ಸಮುದಾಯಗಳು ಕೈಜೋಡಿಸಲು ಕರೆ

ಮಲ್ಲಮ್ಮ ನುಡಿ ವಾರ್ತೆ ಬೀದರ.ಜ.06: ಈ ತಿಂಗಳ 9 ರಂದು ಬೀದರ್ ನಗರದಲ್ಲಿ ಶಾಂತಿಯುತ ಬೀದರ್ ಬಂದ್ ಹಮ್ಮಿಕೊಂಡಿದ್ದು ಜಿಲ್ಲೆಯ ಎಲ್ಲಾ ಸಮುದಾಯಗಳ ಮುಖಂಡರು ಬಂದ್‌ಗೆ ಬೆಂಬಲ ಸೂಚಿಸಬೇಕೆಂದು ಹಾಗೂ ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಸ್ವಾಭಿಮಾನಿ ಡಾ. ಬಿ ಆರ್ ಅಂಬೇಡ್ಕರ್ ವಾದಿಗಳ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷರಾದ ಉಮೇಶಕುಮಾರ ಸ್ವಾರಳ್ಳಿಕರ್ ಕರೆ ನೀಡಿದರು.

ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಡಿಸೆಂಬರ್ 18ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನ ಮೇಲ್ಮನೆಯಾದ ಚಿಂತಕರ ಚಾವಡಿಯನಿಸಿರುವ ರಾಜ್ಯಸಭೆಯಲ್ಲಿ "ಅಂಬೇಡ್ಕರ್ ಅಂಬೇಡ್ಕರ್ ಅಂಬೇಡ್ಕರ್ ಅನ್ನುವುದು ಫ್ಯಾಷನ್ ಮಾಡಿಕೊಂಡಿದ್ದಾರೆ ಅಂಬೇಡ್ಕರ್ ಅಂಬೇಡ್ಕರ್ ಅನ್ನುವುದು ಬಿಟ್ಟು ದೇವರ ಹೆಸರು ಜಪಿಸಿದರೆ ಏಳು ಜನ್ಮ ಸ್ವರ್ಗ ಸಿಗುತ್ತದೆ" ಎಂದು ವ್ಯಂಗ್ಯ ಮಾಡಿ ಸಂವಿಧಾನ ಶಿಲ್ಪಿ, ಪ್ರಜಾಪ್ರಭುತ್ವದ ಪಿತಾಮಹ, ವೈಚಾರಿಕ ನಾಯಕ ಡಾ. ಬಿಆರ್ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದನ್ನು ವಿರೋಧಿಸಿ ನಗರದಲ್ಲಿ ಡಿಸೆಂಬರ್ 24ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡು ಅಮಿತ್ ಶಾ ಅವರು ರಾಜೀನಾಮೆ ನೀಡಬೇಕು ಹಾಗೆ ಅವಮಾನ ಮಾಡಿದ್ದಕ್ಕೆ ಕ್ಷಮೆ ಯಾಚಿಸಬೇಕೆಂದು ಆಗ್ರಹಿಸಲಾಗಿತ್ತು. ಒಂದು ವಾರದೊಳಗೆ ಕ್ಷಮೆ ಯಾಚಿಸದಿದ್ದರೆ ಹಾಗೂ ರಾಜೀನಾಮೆ ನೀಡದಿದ್ದರೆ ಬೀದರ್ ಬಂದ್ ಗೆ ಕರೆ ನೀಡುವುದಾಗಿ ಘೋಷಿಸಲಾಗಿತ್ತು. ಅದರಂತೆ ಈ ತಿಂಗಳ 9 ರಂದು ಬೀದರ್ ಬಂದ್ ಗೆ




ಕರೆ ನೀಡಲಾಗಿದೆ ಎಂದರು.

ಅಂದು ಬೆಳಿಗ್ಗೆ 7: ಗಂ-ಟೆಗೆ ಅಂಬೇಡ್ಕರ್ ವಾದಿಗಳ ಹೋರಾಟ ಸಮಿತಿಯ ಎಲ್ಲ ಪದಾಧಿಕಾರಿಗಳು, ನಗರದ ಅಂಬೇಡ್ಕರ್ ವೃತ್ತದಲ್ಲಿ ಸೇರಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಅದರಲ್ಲಿ ಮೂರು ತಂಡಗಳನ್ನು ರಚಿಸಿ ಒಂದು ತಂಡವನ್ನು ನೌಬಾದ್ ಕಡೆಗೆ, ಮತ್ತೊಂದು ತಂಡವನ್ನು ಓಲ್ಡ್ ಸಿಟಿಯಲ್ಲಿ, ಇನ್ನೊಂದು ತಂಡವನ್ನು ಗುಂಪಾ ಕಡೆಗೆ ತೆರಳಲಿದೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 15,000 ಕರಪತ್ರಗಳನ್ನು ಹಂಚಲಾಗಿದ್ದು ಕನಿಷ್ಠ 10,000 ಅಂಬೇಡ್ಕರ್ ಅನುಯಾಯಿಗಳು ಬಂದ್ ನಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಈ ಬಂದ್ ಸಂಪೂರ್ಣ ಶಾಂತಿಯುತವಾಗಿರಲಿದ್ದು ಈಗಾಗಲೇ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಬಂದ್ ಗೆ ಬೆಂಬಲ ಸೂಚಿಸಿರುವುದರಿಂದ ಅಂದು ವಾಹನ ವ್ಯವಸ್ಥೆ ಇರುವುದಿಲ್ಲ. ಆದರೆ ಆಸ್ಪತ್ರೆಗಳು ಹಾಗೂ ಅಂಬುಲೆನ್ಸ್ ಸೇವೆಗೆ ಯಾವುದೇ ತೊಂದರೆ ನೀಡಬಾರದೆಂದು ಈಗಾಗಲೇ ನಿರ್ಧರಿಸಲಾಗಿದ್ದು ಎಂದಿನಂತೆ ಆಸ್ಪತ್ರೆಗಳು ಹಾಗೂ ಔಷಧಿ ಅಂಗಡಿಗಳು ತೆರದಿರಲಿವೆ. ಆದ್ದರಿಂದ ಈ ಶಾಂತಿಯುತ ಬಂಧುಗೆ ಎಲ್ಲರೂ ಕೈಜೋಡಿಸಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕೋರಿದರು. ಸಮಿತಿಯ ಗೌರವಾಧ್ಯಕ್ಷರಾದ ಚಂದ್ರಕಾಂತ ನಿರಾಟೆ ಮಾತನಾಡಿ, ಈ ಬಂದ್ ನಲ್ಲಿ ಈಗಾಗಲೇ ಜಿಲ್ಲೆಯ ಸಮಸ್ತ ಸ್ವಾಭಿಮಾನಿ ಡಾ ಬಿ ಆರ್ ಅಂಬೇಡ್ಕರ್ ವಾದಿಗಳು, ಬುದ್ಧ ಬಸವ ಅಂಬೇಡ್ಕರ್ ಅವರ ಅನುಯಾಯಿಗಳು, ಪ್ರಗತಿಪರರು, ಕನ್ನಡಪರ ಸಂಘಟನೆಗಳು ಪ್ರಮುಖರು, ದಲಿತಪರ ಸಂಘಟನೆಗಳ ಶೋಷಿತ ಮತ್ತು ಅಲ್ಪಸಂಖ್ಯಾತಪರ ಹೋರಾಟಗಾರರು ಸರ್ವಧರ್ಮ ಗುರುಗಳು, ವಿವಿಧ ಕ್ಷೇತ್ರದ ವ್ಯಾಪಾರಸ್ಥರು, ಆಟೋ ಚಾಲಕರು, ಸಾಹಿತಿಗಳು, ಚಿಂತಕರು, ಕಾರ್ಮಿಕರು, ರೈತರು, ಯುವಕ- ಯುವತಿಯರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಲಾಗಿದೆ. ಈಗಾಗಲೇ ಹಲವು ಸಂಘಟನೆಗಳು ಬಂದ್ ಗೆ ಬೆಂಬಲ ಸೂಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದರು. ಸಮಿತಿಯ ಗೌರವಾಧ್ಯಕ್ಷರಾದ ಕಲ್ಯಾಣರಾವ ಭೋಸ್ಲೆ, ಕಾರ್ಯಾಧ್ಯಕ್ಷ ವಿಷ್ಣುವರ್ಧನ್ ವಾಲದೊಡ್ಡಿ, ಉಪಾಧ್ಯಕ್ಷ ಅಂಬರೀಶ್ ಕುದುರೆ, ರಾಜಕುಮಾರ ಭಾವಿಕಟ್ಟಿ, ಕಾರ್ಯದರ್ಶಿ ವಿಶಾಲ ಹೊನ್ನಾ, ಸಂಘಟನಾ ಕಾರ್ಯದರ್ಶಿ ರಾಹುಲ ಡಾಂಗೆ ಅಂಬೇಡ್ಕರ್ ಬೌದ್ಧೆ, ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಇಂದು ಕಾಂಗ್ರೆಸ್ ಕಚೇರಿಗೆ ಸಚಿವ ಜಾರಕಿಹೋಳಿ

ಮಲ್ಲಮ್ಮ ನುಡಿ ವಾರ್ತೆ ಬೀದರ. ಜ. 06 : ಇಲ್ಲಿಯ ಶಿವನಗರದಲ್ಲಿ ಇರುವ ಕಾಂಗ್ರೆಸ್ ಜಿಲ್ಲಾ ಘಟಕದ ಕಚೇರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೋಳಿ ಮಂಗಳವಾರ (ಜ.7) ಮಧ್ಯಾಹ್ನ 3ಕ್ಕೆ ಭೇಟಿ ನೀಡಲಿದ್ದಾರೆ.

ಈ ವೇಳೆ ಸಚಿವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

ಪಕ್ಷದ ಹಾಲಿ, ಮಾಜಿ ಚುನಾಯಿತ ಪ್ರತಿನಿಧಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಳ್ಳಬೇಕು ಎಂದು ಪಕ್ಷದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಕೋರಿದ್ದಾರೆ.

**ಶಾಲಾ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಾರ್ಯಾಲಯ, ಬೀದರ. ಜಿಲ್ಲೆ – ಬೀದರ**

No DPI/2024-25/IND0451 Date: 06/01/2025

**–:: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ::–**

2023–24 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅಕ್ಷರ ಅವಿಷ್ಕಾರ ಯೋಜನೆ ಅನುದಾನದಡಿ ಬೀದರ ಜಿಲ್ಲೇಯ ಬಸವಕಲ್ಯಾಣ ತಾಲೂಕಿನ 10 ಸರಕಾರಿ ಶಾಲೆಗಳಿಗೆ ಗ್ರೀನ್ ಸಾಫ್ಟ್ ಬೋರ್ಡ ಸರಬರಾಜು ಸಂಬಂಧ ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. ದ್ವಿಲಕೋಟೆ ಪದ್ಧತಿಯಲ್ಲಿ ಆಸಕ್ತ ಅಧೀಕೃತ ಮಾರಾಟ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ.

**ಟೆಂಡರ್ ವೇಳಾ ಪಟ್ಟಿ ಹಾಗೂ ವಿವರಗಳು**

1) ಟೆಂಡರ್‌ಗೆ ಇಟ್ಟಿರುವ ಮೊಬಲಗು: **ರೂ. 1.88 ಲಕ್ಷ,** 2) ಟೆಂಡರ್ ಡಾಕ್ಯುಮೆಂಟ್‌ನ್ನು ವೆಬ್ ಸೈಟ್ ನಿಂದ ಡೌನಲೋಡ್ ಮಾಡಕೊಳ್ಳಬೇಕಾದ ದಿನಾಂಕ: **06–01–2025 ರಿಂದ 15–01–2025 ಸಂಜೆ: 5.00,** 3) ಟೆಂಡರ್ ಬಿಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್ ಸೈಟ್ ಮೂಲಕ) ಸಮಯ: **ದಿ:15–01–2025 ಸಮಯ ಸಂಜೆ: 5.00,** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ: **ದಿನಾಂಕ 16–01–2025 ಸಮಯ ಸಂಜೆ 5.15,** 5) ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ಸಂಭಾವ್ಯ ದಿನಾಂಕ & ಸಮಯ ದಿ: **20–01–2025 ಮು:11.00 ಗಂಟೆ,** 6) ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ): ರೂ:4700/–

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9448999330, ಅಂತರ ಜಾಲತಾಣದ ವಿಳಾಸ www.kppp.karnataka.gov.in

ಸಹಿ/– ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೀದರ ಜಿಲ್ಲೆ.

ವಾ.ಸಾ.ಸಂ.ಇ/ಬೀದರ/337/ಕೆ.ಎಸ್.ಎಂ.ಸಿ.&ಎ/2024–25

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.